# ಅಧ್ಯಯನ 7 Study VII

# ನೂತನ ಸೃಷ್ಟಿಯ ಧರ್ಮಶಾಸ್ತ್ರ (ಕಾನೂನು)

## THE LAW OF THE NEW CREATION

**ಕಾನೂನನ್ನು ನೀಡುವುದೆಂದರೆ ಅದನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವನ್ನು ನೀಡುವುದೆಂಬ ಅಭಿಪ್ರಾಯವುಂಟಾಗುತ್ತದೆ – ಮೂಲದಲ್ಲಿ ಬರೆದ ದೈವೀಕ ಕಾನೂನು ಜೀವದ ಕಾನೂನನ್ನು ಪತನಗೊಂಡ ಜನಾಂಗಕ್ಕೆ ನೀಡಲು ಸಾಧ್ಯವಿಲ್ಲ–ವಿಮೋಚನೆಯು ಕಾನೂನಲ್ಲ ಆದರೆ ಕೃಪೆ–ಕ್ರಿಸ್ತನ ಒಂದು ತ್ಯಾಗದಿಂದ ನೂತನ ಒಡಂಬಡಿಕೆಯು ಸ್ಥಿರಪಟ್ಟಿತು ಮತ್ತು ಧರ್ಮಶಾಸ್ತ್ರದ ಒಡಂಬಡಿಕೆಯ ಕಾನೂನು ನೆರವೇರಿತು – ಸಿನಾಯಿಯ ಧರ್ಮಶಾಸ್ತ್ರೀಯ ಕಾನೂನು ಶಾರೀರಿಕ ಇಸ್ರಾಯೇಲ್ಯರಿಗೆ ಮಾತ್ರ –ನೂತನ ಒಡಂಬಡಿಕೆಯ ಕಾನೂನು–ಇದರ ಕಟ್ಟಳೆಯ ಮೂಲಕ ಸಂತರುಗಳು ಪ್ರಗತಿಹೊಂದಿದರು–ದೈವೀಕ ಪ್ರಕಟನೆ ಮತ್ತು ಆ ಒಡಂಬಡಿಕೆಯ ಅಡಿಯಲ್ಲಿ ನೂತನ ಸೃಷ್ಟಿಗಳು ಪ್ರತ್ಯೇಕವಾದವರು ಮತ್ತು ಭಿನ್ನತೆಯುಳ್ಳವರು – ಸಮರ್ಪಕವಾದ ಕಾನೂನಿನ ಮೆಚ್ಚುಗೆಯಲ್ಲಿ ಬೆಳೆಯುವುದು–ಗುರಿಹಿಡಿದು ಓಡುವುದು ಮತ್ತು ಅದರಲ್ಲಿ ಭದ್ರವಾಗಿ ನಿಂತುಕೊಳ್ಳುವುದು – ಸ್ವರ್ಣ ನಿಯಮ – ವಿಮೋಚನೆಯ ಸಮರ್ಪಕವಾದ ಕಾನೂನು**

ಯಾವುದೇ ದಕ್ಷ ಅಧಿಕಾರಿಯು ಒಂದು ಧರ್ಮಶಾಸ್ತ್ರವನ್ನು ನೀಡುವಾಗ ಅದನ್ನು ಅನುಸರಿಸುವ ಸಾಮರ್ಥ್ಯವನ್ನು ಸಹ ಧರ್ಮಶಾಸ್ತ್ರಕ್ಕೊಳಪಟ್ಟವನಿಗೆ ನೀಡಲಾಗಿರುತ್ತದೆ, ಅಥವಾ ಅದರಡಿಯಲ್ಲಿನ ಉಲ್ಲಂಘನೆಯನ್ನು ಮನ್ನಿಸುವ ವ್ಯವಸ್ಥೆಯನ್ನು ಕೂಡ ಸೂಚಿಸಲಾಗಿರುತ್ತದೆ. ಕಾನೂನು ನೀಡುವಿಕೆಯು ಅದರ ಉಲ್ಲಂಘನೆಯ ಸಾಧ್ಯತೆಯನ್ನು ಸಹಾ ಪೂರ್ವಭಾವಿಯಾಗಿ ಗ್ರಹಿಸುತ್ತದೆ. ಆದುದರಿಂದ ಕಾನೂನು ಸದಾ ಅದರ ದಂಡನೆಗಳನ್ನು ಸಹಾ ಒಳಗೊಂಡಿರುತ್ತದೆ. ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟ ತಂದೆಯಾದ ಆದಾಮನ ಪ್ರಕರಣದಲ್ಲಿ ದೇವರ ಚಿತ್ತಕ್ಕೆ ಆತನ ಅವಿಧೇಯತೆಯ ದೆಸೆಯಿಂದ ಶಾಪವೆಂಬ ದಂಡನೆಯುಂಟಾಯಿತೆಂದು ನಮಗೆ ತಿಳಿಸಿಲ್ಪಟ್ಟಿದೆ. ಆತನಿಗೆ ಒಂದು ನಿಯಮವು ನೀಡಲ್ಪಟ್ಟಿತ್ತು ಮತ್ತು ಅದು ಸಾಕಷ್ಟು ಸ್ಪಷ್ಟವಾಗಿತ್ತು ಎಂದು ನಾವು ಆಲೋಚಿಸುತ್ತೇವೆ. ಇಲ್ಲವಾದಲ್ಲಿ ಆತನು ಸೃಷ್ಟಿಕರ್ತನಿಂದ ಆ ರೀತಿಯಾಗಿ ಅಪರಾಧಿಯೆಂದು ದಂಡಿಸಲ್ಪಡುತ್ತಿದ್ದಿಲ್ಲ. ಏದೇನಿನ ಪಾಪವು ದೇವರ ಆಜ್ಞೆಯ ಉಲ್ಲಂಘನೆಯಾಗಿತ್ತು ಎಂದು ಸ್ಪಷ್ಟವಾಗಿ ನಮಗೆ ತಿಳಿಸಲ್ಪಟ್ಟಿದೆ. ಮರಣದಂಡನೆ ಎಂಬ ನ್ಯಾಯತೀರ್ಪು ಆದಾಮನ ಮೇಲೆ ಬಂತು ಮತ್ತು ಇದು ಆತನ ಮೂಲಕವಾಗಿ ಆತನ ಮುಂದಿನ ಪೀಳಿಗೆಗೂ ವ್ಯಾಪಿಸಲ್ಪಟ್ಟಿತು. ಇದು ಆತನು ಒಳಗಾಗಿದ್ದ ಮತ್ತು ತಿಳಿದೂ ಉಲ್ಲಂಘಿಸಿದ ಕಾನೂನಿನ ಧಾರಣಶಕ್ತಿಯನ್ನು ಸೂಚಿಸುತ್ತದೆ. ಇಲ್ಲವಾದಲ್ಲಿ ಅಪರಾಧವೆಲ್ಲವೂ ಕಾನೂನನ್ನು ನೀಡುವವನದಾಗುತ್ತಿತ್ತು. ಆದಾಮನು ಕಾನೂನನ್ನು ಪಡೆಯಲು ಮತ್ತು ಅದನ್ನು ಪಾಲಿಸುವ ಸ್ಥಿತಿಯಲ್ಲಿ ಮಾತ್ರವೇ ಇದ್ದು ಆತನಿಗೆ ಇದರಿಂದ ಕ್ಷಮಾಪಣೆಯ ಅವಕಾಶವಿರುತ್ತಿದ್ದಿಲ್ಲ ಯಾವ ಮಧ್ಯಸ್ಥಗಾರನಾಗಲೀ ಇರುತಿದ್ದಿಲ್ಲ. ಹೀಗಾಗಿ ಪೂರ್ಣ ದಂಡನೆಯು ಆತನ ಮೇಲೆ ಬಂತು.

ನಮ್ಮ ಆದಿ ತಂದೆತಾಯಿಗಳಿಗೆ ದೇವರು ಕಲ್ಲಿನ ಮೇಲೆ ಕೆತ್ತಿದ ಅಥವಾ ಬೇರೆ ರೀತಿಯಾದ ಯಾವುದೇ ಲಿಖಿತ ರೂಪದ ನೀತಿ ನಿಯಮಗಳನ್ನು ನೀಡಿದ್ದನೆಂಬುದಕ್ಕೆ ಯಾವ ದಾಖಲೆಯೂ ಇಲ್ಲ. ಇಂದಿನ ದಿನಗಳಲ್ಲಿ ಈ ರೀತಿಯ ನೀತಿ ಸಂಹಿತೆಗಳು ಸಾಮಾನ್ಯ. ಪರಿಪೂರ್ಣನಾಗಿದ್ದ ಆದಾಮನು ಯಾವ ರೀತಿಯಲ್ಲಿ ಸಮರ್ಪಕವಾದ ಕಾನೂನನ್ನು ಹೊಂದಿದ್ದನೆಂಬುದು ಮತ್ತು ಅದರಡಿಯಲ್ಲಿ ಶೋಧಿಸಲ್ಪಟ್ಟು ವಿಫಲತೆ ಹೊಂದಿದವನಾಗಿ ಹಾಗೂ ದಂಡನೆಯನ್ನು ಪಡೆದನೆಂಬುದನ್ನು ಮಾನವ ಬಲಹೀನತೆಗಳ ಕಾರಣ ಯಾರೂ ಕಂಡುಕೊಂಡಿಲ್ಲ. ಕಾನೂನುಗಳು ಬಾಹ್ಯದಲ್ಲಿ ಕಾಗದ ಅಥವಾ ಶಿಲೆ ಮುಂತಾದವುಗಳ ಮೇಲೆ ಲಿಖಿತ ರೂಪದಲ್ಲಿ ಇರಬೇಕೆಂದು ಗ್ರಹಿಸುವುದು ಮತ್ತು ದೈವಿಕ ಕಾನೂನುಗಳ ಇನ್ನೂ ಉತ್ತಮ ರೀತಿಯ ಬರಹವು ಮಾನವನ ಸೃಷ್ಟಿಯಲ್ಲಿಯೇ ಇದೆಯೆಂದು ಗ್ರಹಿಸದಿರುವುದು ತಪ್ಪು. ಇವು ನೈತಿಕ ಸಿದ್ಧಾಂತಗಳೊಂದಿಗೆ ಸಾಮರಸ್ಯಗೊಂಡಿದ್ದು ದೈವಿಕ ಕಾನೂನುಗಳು– ತಪ್ಪು ಮತ್ತು ಸರಿಯನ್ನು ಮೆಚ್ಚಿಕೊಳ್ಳುವುದು –ಪರಿಪೂರ್ಣ ಶರೀರ ರಚನೆಯಲ್ಲಿಯೇ ಬರೆಯಲ್ಪಟ್ಟಿದೆ. ಈ ರೀತಿಯಲ್ಲಿ ನಿಯಮ ಅಥವಾ ಕಾನೂನುಗಳು ಆತನಲ್ಲಿಯೂ ಆತನ ಎಲ್ಲಾ ದೇವ ದೂತರುಗಳಲ್ಲಿಯೂ ಅಡಕವಾಗಿದ್ದು ಅವು ಆದಾಮ ಮತ್ತು ಹವ್ವಳ ಸೃಷ್ಟಿರಚನೆಯಲ್ಲಿಯೂ ಬರೆಯಲ್ಪಟ್ಟಿತ್ತು. ಅವರು ಪಾಪಕ್ಕೆ ಒಲವುಳ್ಳವರಾಗಿರಲಿಲ್ಲ. ನಿಜವಾಗಿಯೂ ಅವರು ನೀತಿಯ ಬಗ್ಗೆ ಒಲವುಳ್ಳವರಾಗಿದ್ದರು. ಅವರು ನೀತಿವಂತರಾಗಿದ್ದು, ನೀತಿವಂತಿಕೆ ಮತ್ತು ಪರಿಪೂರ್ಣ ಪರಿಸ್ಥಿತಿಗಳಿಂದ ಸುತ್ತುವರೆಯಲ್ಪಟ್ಟಿದ್ದರು ಮತ್ತು ತಮ್ಮ ಸೃಷ್ಟಿಕರ್ತನೆಡೆಗಿರುವ ಋಣದ ಅರಿವುಳ್ಳವರಾಗಿದ್ದರು ಮತ್ತು ಆತನ ಆಜ್ಞೆಗಳನ್ನು ಪಾಲಿಸುವ ತಮ್ಮ ಜವಾಬ್ಧಾರಿಯನ್ನು ಅರಿತವರಾಗಿದ್ದರು. ಆತನು ತಮಗೆ ಏನನ್ನು ಆಜ್ಞಾಪಿಸಿದ್ದಾನೆಂಬುದರ ಬಗ್ಗೆ ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಇದರಲ್ಲಿ ಯಾವ ಅಸ್ಪಷ್ಟತೆಯೂ ಇದ್ದಿಲ್ಲ. ಆದುದರಿಂದ ಅದನ್ನು ಮೀರಿದ್ದಕ್ಕೆ ಯಾವ ನೆಪವಾದರೂ ಇಲ್ಲ. ಅನನುಭವ ಮುಂತಾದ ಕಾರಣಗಳಿಂದ ಅವರಿಗೆ ಕರುಣೆ ದೊರೆಯಬಹುದಿತ್ತು. ಆದರೆ ಪಾಪಕ್ಕೆ ಯಾವ ದಂಡನೆ ಉಂಟೆಂಬುದರ ಬಗ್ಗೆ ಗ್ರಹಿಕೆ ಅವರಿಗೆ ಇದ್ದಿಲ್ಲ ಎಂಬ ಸಂಗತಿಯು ಅವರಿಗೆ ತಪ್ಪಾದ ಮಾರ್ಗ ಮತ್ತು ಸರಿಯಾದ ಮಾರ್ಗಗಳು ಯಾವುದೆಂದು ಅವರಿಗೆ ತಿಳಿದಿತ್ತು ಎಂಬ ಮತ್ತೊಂದು ಸತ್ಯ ಸಂಗತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ದೇವರಿಗೆ ವಿಧೇಯರಾಗಿರುವುದು ಸರಿಯಾದುದು ಮತ್ತು

ಆತನಿಗೆ ಅವಿಧೇಯರಾಗುವುದು ಸರಿಯಲ್ಲ ಎಂದು ಹಾಗೂ ಅವಿಧೇಯತೆ ಯಿಂದುಂಟಾಗುವ ಅನರ್ಥಗಳಿಂದ ಪೂರ್ಣವಾಗಿ ಪ್ರತ್ಯೇಕವಾದುದು ಎಂಬುವ ಅರಿವಿತ್ತು. ಆದುದರಿಂದ ಅಪೋಸ್ತಲನು ಆದಾಮನು ಮೋಸಗೊಳ್ಳಲಿಲ್ಲ, ಆದರೆ ಆತನು ಈ ಉಲ್ಲಂಘನೆಯನ್ನು ತಿಳಿದೂ ತಿಳಿದು ಬೇಕೆಂತಲೇ ಮಾಡಿದನು. ಆದುದರಿಂದ ತನ್ನ ಮೇಲೆ ಶಾಪವನ್ನು ಬರಮಾಡಿಕೊಂಡನು. ಮರಣವೆಂಬ ಈ ದಂಡನೆಯನ್ನು ಆತನ ಸೃಷ್ಟಿಕರ್ತನು ಆತನಿಗೆ ಮುಂಚಿತವಾಗಿಯೇ ತಿಳಿಸಿದ್ದನು (ಆದಿಕಾಂಡ 2:17 ನೋಡಿರಿ).

ಇಂದು ನಾವು ನಮ್ಮನ್ನು ನೋಡುವಾಗ ಈ ಲೋಕವು ಸರ್ವಸಾಮಾನ್ಯವಾಗಿ ಮೂಲದಲ್ಲಿ ಸೃಷ್ಟಿಸಲ್ಪಟ್ಟ ನಮ್ಮ ಆದಿ ತಂದೆತಾಯಿಗಳಿಗಿದ್ದ ದೇವರ ಸ್ವರೂಪವನ್ನು ಗಣನೀಯವಾದ ರೀತಿಯಲ್ಲಿ ಕಳಕೊಂಡಿದ್ದೇವೆಂಬುದು ಕಂಡುಬರುತ್ತದೆ. ತಪ್ಪು ಮತ್ತು ಸರಿಗಳ ಮೆಚ್ಚುಗೆಯ ಅಂತರ್‌ದೃಷ್ಟಿಗೂ ಹೆಚ್ಚಾದುದನ್ನು ಅವರು ಕಳಕೊಂಡಿದ್ದಾರೆ. ಒಮ್ಮೆ ಮಾನವ ಸ್ವಭಾವದಲ್ಲಿ ಸ್ಪಷ್ಟವಾಗಿ ಮತ್ತು ವೈಶಿಷ್ಟ್ಯಪೂರ್ಣವಾಗಿ ಅಡಗಿಸಿಟ್ಟಿದ್ದ ದೇವರ ನಿಯಮಗಳು ಕಳೆದ ಸುಮಾರು ಆರು ಸಾವಿರ ವರ್ಷಗಳ ಪಾಪ ಮತ್ತು ಮರಣದ ಅಧಿಕಾರದ ಅವಧಿಯಲ್ಲಿ ಹೆಚ್ಚಾದ ಪ್ರಮಾಣದಲ್ಲಿ ತೊಡೆದು ಹಾಕಲ್ಪಟ್ಟಿವೆ. ದೇವರು ಕೆಲವೊಂದು ಮಾನವ ಕುಟುಂಬಗಳೊಡನೆ ಮಾಡಿದ ಸಂಪರ್ಕಗಳಲ್ಲಿ ಗಣನೀಯ ಮಟ್ಟದಲ್ಲಿ ಹಲವಾರು ಹೃದಯಗಳಲ್ಲಿ ತನ್ನ ಮೂಲ ನಿಯಮವನ್ನು ಪುನರುಜ್ಜೀವಗೊಳಿಸಿದ್ದಾನೆ ಮತ್ತು ನೈತಿಕತೆಯ ವಿವಿಧ ಲಕ್ಷಣಗಳನ್ನು ಹೆಚ್ಚು ಕಡಿಮೆ ಆಳವಾಗಿ ಮೂಲಕ್ಕೆ ಹಿಂತಿರುಗಿಸಿದ್ದಾನೆ. ಹೀಗಿದ್ದರೂ, ಹೆಚ್ಚು ನಾಗರೀಕತೆಯುಳ್ಳ, ಹೆಚ್ಚು ಕ್ರೈಸ್ತತ್ವವಿರುವ ಜನರಲ್ಲಿಯೂ ವಿವಿಧ ಸಮಸ್ಯೆಗಳಲ್ಲಿ ತನ್ನ ಸ್ವಂತ ನಿರ್ಣಯಗಳ ತಪ್ಪು ಒಪ್ಪುಗಳ ಬಗ್ಗೆ ಯಾರೂ ಭರವಸೆಯ ಪ್ರಯತ್ನ ಮಾಡಿಲ್ಲ. ಆದುದರಿಂದ ನಮಗೆ ಮುಂದುವರೆಯಲು ಇನ್ನೂ ಕೆಲವು ದೈವಿಕ ನಿರ್ಧಿಷ್ಟ ಪ್ರಮಾಣಗಳ ಅಗತ್ಯತೆ ಇದೆ ಮತ್ತು ಅವುಗಳ ಮೂಲಕ ತಪ್ಪು ಸರಿಗಳ ನಮ್ಮ ಅಂದಾಜನ್ನು ನಾವು ಸರಿಪಡಿಸಿಕೊಳ್ಳಬಹುದಾಗಿದೆ ಮತ್ತು ಅವನ್ನು ದೈವಿಕ ಗುರಿಯ ಹತ್ತಿರ ಹತ್ತಿರಕ್ಕೆ ತರಬಹುದಾಗಿದೆ. ಆದಾಗ್ಯೂ, ಕೆಲವು ಕೆಳ ದರ್ಜೆಯ ಕ್ರೈಸ್ತೇತರರಲ್ಲಿಯೂ ನಾವು ಒಮ್ಮೊಮ್ಮೆ ತಪ್ಪು ಸರಿಗಳ ವಿವೇಚನಾ ಶಕ್ತಿಯನ್ನು, ಹೆಚ್ಚು ಕಡಿಮೆ ಅಪಕ್ವವಾದ ವಿಚಾರಧಾರೆಯನ್ನು ಕಾಣಬಹುದು. ಇವುಗಳು ಮಾನವನು ಮೂಲದಲ್ಲಿ ದೈವ ಸ್ವರೂಪದಲ್ಲಿ ರಚಿಸಲ್ಪಟ್ಟಾಗಿನ ಮೂಲ ನಿಯಮಗಳ ನೇಯ್ದ ಮತ್ತು ತಿರುಚಿದ ಉಳಿಕೆಗಳು. ಅಪೋಸ್ತಲನು ಕ್ರೈಸ್ತೇತರಲ್ಲಿರುವ ಈ ಸ್ಥಿತಿಯ ಬಗ್ಗೆ ಹೇಳುವುದೇನೆಂದರೆ–"ಹೇಗೆಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯಗಳಲ್ಲಿ ಬರೆದದೆ ಎಂಬುದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹಾ ಸಾಕ್ಷಿ ನುಡಿಯುತ್ತದೆ; ಅವರ ಯೋಚನೆಗಳು ವಾದಿ ಪ್ರತಿವಾದಿಗಳಂತೆ ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ" (ರೋಮಾ.2:15).

ಜನರಲ್ಲಿ ಅಪರಾಧಿಗಳಿಗೂ, ಅಪರಾಧಿಗಳಲ್ಲದವರಿಗೂ ವಿವಿಧ ರೀತಿಯ ಕಾನೂನುಗಳು ಉಂಟು. (1) ನಾಗರೀಕತೆಯ ಕಾನೂನುಗಳು, ಇವನ್ನು ಪಾಲಿಸುವವರಿಗೆ ಇವು ಜೀವದ, ಶಾಂತಿಯ ಮತ್ತು ಸ್ವಾತಂತ್ರ್ಯಮುಂತಾದವುಗಳ ಖಾತರಿಯನ್ನು ನೀಡುತ್ತದೆ. ಅದೇ ಸಮಯದಲ್ಲಿ ಪಾಲಿಸದವರಿಗೆ ಸ್ವಾತಂತ್ರ್ಯ ಮತ್ತು ಸೌಕರ್ಯಗಳನ್ನು ಕಳೆದುಕೊಳ್ಳುವ, ಸೆರೆಮನೆಯ ಬೆದರಿಕೆಯನ್ನು ಉಂಟು ಮಾಡುತ್ತದೆ. (2) ಅಪರಾಧಿಗಳಿಗಿರುವ ಕಾನೂನುಗಳು ನಿಗ್ರಹವನ್ನು ಅನುಸರಿಸದ ಹೊರತು ಬಹಳಷ್ಟು ಕಠೋರವಾಗಿವೆ; ಲೌಕಿಕ ರೀತಿಯಲ್ಲಿ ಅವರಿಗೆ ಯಾವ ಸ್ವಾತಂತ್ರ್ಯವನ್ನೂ ನೀಡುವುದಿಲ್ಲ.

ಅದರಂತೆ ದೈವೀಕ ಕಾನೂನುಗಳಲ್ಲಿಯೂ ಸಹಾ. ಆದಾಮನು ಪರೀಕ್ಷೆಗೊಳಗಾದ ಮೂಲ ನಿಯಮ ನಮ್ಮಲ್ಲಿದೆ. ಪ್ರಾರಂಭದಲ್ಲಿ ಆತನಿಗೆ ಜೀವನ, ಶಾಂತಿ, ಸ್ವಾತಂತ್ರ್ಯ ಮುಂತಾದ ಅನೇಕ ಆಶೀರ್ವಾದಗಳೂ ಸಂತೋಷಗಳೂ ಮತ್ತು ಅವಕಾಶಗಳೂ ಇದ್ದವು. ಇವುಗಳು ಆತನು ತನ್ನ ಸೃಷ್ಟಿಕರ್ತನಿಗೆ ವಿಧೇಯನಾಗಿರುವವರೆಗೆ ಮಾತ್ರ ಖಾತರಿಯಾಗಿದ್ದವು. ಅವಿಧೇಯನಾದಾಗ **"ನೀನು ಸತ್ತೇ ಹೋಗುವಿ"** ಎಂಬ ಮರಣ ದಂಡನೆ ಆತನಿಗೆ ವಿಧಿಸಲ್ಪಟ್ಟಿತು. ಮತ್ತು ಸ್ವಾಭಾವಿಕವಾಗಿ ಈ ದಂಡನೆಯು ಆತನ ಸಂತಾನದವರ ಮೇಲೂ ಬಂತು. ಆದುದರಿಂದ ಆದಾಮನ ಉಲ್ಲಂಘನೆಯ ಸಮಯದಿಂದಲೂ ಆತನು ಒಬ್ಬ ಪಾತಕಿ, ಒಬ್ಬ ಅಪರಾಧಿ, ಈ ಹಿಂದೆ ಅನುಭವಿಸಿದ ಜೀವನದ ಅನೇಕ ನಿರೀಕ್ಷೆಗಳಿಂದ ವಂಚಿತನಾದನು, ತನ್ನ ಏದೇನಿನ ಮನೆಯಿಂದಲೂ ಹೊರಹಾಕಲ್ಪಟ್ಟವನು ಮತ್ತು ತನ್ನ ಸೃಷ್ಟಿಕರ್ತನ ಸಾಂಗತ್ಯದಿಂದಲೂ ಕಸಿದುಕೊಳ್ಳಲ್ಪಟ್ಟವನು. ಆದರೂ ಇನ್ನೂ ಸಿದ್ಧಪಡಿಸದೇ ಇದ್ದ ಭೂಮಿಯು ಆತನ ಸುಧಾರಣಾ ಗೃಹವೂ ಮತ್ತು ಸಮಾಧಿ ಎಂಬ ಶಾಶ್ವತವಾದ ಕಾರಾಗೃಹವೂ ಆಯಿತು. ಈ ವರೆಗೆ ಆತನ ಮೇಲೆ ಅಧಿಕಾರ ನಡೆಸುತ್ತಿದ್ದ ಕಾನೂನು ಅಲ್ಲಿಗೆ ಮುಕ್ತಾಯಗೊಂಡಿತು. ಅಂದರೆ ಅದು ಇನ್ನು ಮುಂದೆ ಆತನಿಗೆ ಜೀವನದ ಯಾವ ನಿರೀಕ್ಷೆಯನ್ನೂ ಪ್ರತೀಕ್ಷೆಯನ್ನು ನೀಡಲಾಗಲಿಲ್ಲ, ಆದರೆ ಈಗಾಗಲೇ ಆತನಿಗೆ ಮರಣ ದಂಡನೆಯನ್ನು ವಿಧಿಸಿಯಾಗಿತ್ತು. ಆತನು ಇನ್ನುಮುಂದೆ ಜೀವದ ನಿಯಮದಡಿ ಇಲ್ಲ ಮತ್ತು ಆತನ ಸಂತಾನದಲ್ಲಿ ಯಾರೂ ಜೀವದ ನಿಯಮದಡಿ ಹುಟ್ಟುವುದಿಲ್ಲ ಅಥವಾ ಅವರಿಗೆ ನಿತ್ಯಜೀವವನ್ನು ಪಡಕೊಳ್ಳುವ ಯಾವುದೇ ನಿರೀಕ್ಷೆಯಾಗಲೀ, ಪ್ರತೀಕ್ಷೆಯಾಗಲೀ ಇರುವುದಿಲ್ಲ. ಅವರೆಲ್ಲರೂ ಬಂಧಿಗಳು. ಪಾಪ ಮತ್ತು ಮರಣವು ಸಾಂಕೇತಿಕವಾಗಿ ಹೇಳುವುದಾದರೆ ಅವರುಗಳನ್ನು ಸೆರೆಹಿಡಿಯುವ, ಪೀಡಿಸುವ ಮತ್ತು ಸೆರೆ ಕಾವಲಿನವರಾದವು.

ಆದರೆ, ಮೂಲ ಕಾನೂನು ಅವರ ಮೇಲೆ ಇನ್ನೂ ಜಾರಿಯಾಗದಿದ್ದರೂ, ಅದು ಈಗಾಗಲೇ ಅವರುಗಳ ವಿರುದ್ಧ ತನ್ನ ಪ್ರತೀಕಾರವನ್ನು ವ್ಯಕ್ತಪಡಿಸಿರುವುದಾದರೂ ಅವರು ಹೇಗಾದರೂ ತಮ್ಮನ್ನು ಒಂದು ಸ್ವಾಭಾವಿಕ ಕಾನೂನಿನಡಿಯಲ್ಲಿ ಕಂಡುಕೊಳ್ಳುತ್ತಾರೆ. ಅವರ ಸೆರೆಯ ಸ್ಥಿತಿಯಲ್ಲಿ ಅವರು ಒಂದು ಕಾನೂನು ಜಾರಿಯಲ್ಲಿರುವುದನ್ನು ಕಂಡುಕೊಂಡು ಇದರಡಿಯಲ್ಲಿ ತಮ್ಮ ವಿವೇಚನಾಶಕ್ತಿಯನ್ನು ಉಲ್ಲಂಘಿಸುವದನ್ನು, ಅದರ ಆಳಕ್ಕೆ ತಳ್ಳುವ ಎಲ್ಲಾ ರಭಸವನ್ನೂ ಅವರು ಪಾಪವೆಂದು ಅಂಗೀಕರಿಸುತ್ತಾರೆ. ಇದು ಅವರ ಮೇಲೆ ಬಹು ತ್ವರಿತವಾಗಿ ಅವಮಾನವನ್ನೂ ಮರಣವನ್ನೂ

ತರುವುದಾಗಿದೆ. ಅವರು ಸರಿಯಾದುದೆಂದು ಗ್ರಹಿಸುವುದನ್ನು ಅನುಸರಿಸಲು ಹೆಚ್ಚು ಎಚ್ಚರಿಕೆ ವಹಿಸುವಾಗ ಯಾವುದೂ ಬಿಡುಗಡೆಯ ಇಂಗಿತವನ್ನು ನೀಡದಿದ್ದರೂ ಅವರು ತಮ್ಮ ಸೆರೆಯ ಪರಿಸ್ಥಿತಿ ಹೆಚ್ಚು ಉತ್ತಮಗೊಳ್ಳುವುದನ್ನು ಕಂಡುಕೊಳ್ಳುತ್ತಾರೆ.

ದೇವರು ನಮ್ಮ ಪತನದ ಸ್ಥಿತಿಗೆ ಒಂದು ಜೀವದ ಕಾನೂನನ್ನು ನೀಡಲು ಸಾಧ್ಯವಿಲ್ಲವೆಂದು ಅಪೋಸ್ತಲನು ತಿಳಿಸುತ್ತಾನೆ. ಅವರು ನ್ಯಾಯವಾದ ದಂಡನೆಗೆ ಒಳಗಾಗಿದ್ದಾರೆ ಆ ದಂಡನೆಯ ತೀರ್ಪು ಜಾರಿಯಲ್ಲಿರುವವರೆಗೆ ಅವರಿಗೆ ಮರಣದಿಂದ ಬಿಡಿಗಡೆಗೊಳಿಸಲು ಪಾಲಿಸಬಹುದಾದ ಯಾವುದೇ ಕಾನೂನನ್ನೂ ನೀಡಲಾಗುವುದಿಲ್ಲ. ಅಂತಹ ಯಾವುದೇ ಜೀವದ ಕಾನೂನನ್ನು ಮಾನವ ಕುಟುಂಬಕ್ಕೆ ನೀಡುವ ಮುನ್ನ ಮೊದಲನೆಯ ಕಾನೂನಿನ ತೀರ್ಪನ್ನು ಅನುಭವಿಸಲೇಬೇಕಾಗುವುದು ಮತ್ತು ಅದರ ಶಾಪ ಅಥವಾ ಖಂಡನೆಯು ತೆರವುಗೊಳ್ಳಲೇಬೇಕು. ನಂತರ ಕೆಲವು ಶರತ್ತುಗಳ ಮೇಲೆ ನಿತ್ಯಜೀವವನ್ನು ದಯಪಾಲಿಸುವ ಇತರ ವ್ಯವಸ್ಥೆಗಳನ್ನು ಮಾಡಬಹುದು. ಆದರೆ ಇದು ಮೊದಲನೆ ಉಲ್ಲಂಘನೆಯ ಪರಿಹಾರ ಮತ್ತು ವಿಧಿಸಿದ ತೀರ್ಪು ರದ್ದಾಗಿ ಅದು ಜಾರಿಯಾಗುವವರೆಗೂ ಸಲ್ಲದು. ದೇವರು ಅದಾಮನಿಗೆ ನೀಡಿದ ಅವಕಾಶ ಮತ್ತು ಅದನ್ನು ಆತನು ತನಗಾಗಿಯೂ ತನ್ನ ಸಂತಾನದವರಿಗಾಗಿಯೂ ಕಳಕೊಂಡದರ ಬದಲಾಗಿ ಮಾನವರಿಗೆ ನಿತ್ಯಜೀವದ ಮತ್ತೊಂದು ಅವಕಾಶವನ್ನು ನೀಡುವ ಸಲುವಾಗಿ ಇಂತಹ ಪರಿಹಾರದ ಬಗ್ಗೆ ತನ್ನ ಉದ್ದೇಶವನ್ನು ತಿಳಿಸಿದ್ದಾನೆ. ಆದರೆ ದೇವರ ಈ ವಾಗ್ದಾನವು ಕೇವಲ ನಿರೀಕ್ಷೆಯು ತಳಹದಿಗಷ್ಟೇ ಸಾಕಾಗುವುದಾಗಿದ್ದು ಅದು ಬಹಳ ಅಸ್ಪಷ್ಟವಾಗಿದೆ. ಆದುದರಿಂದ ಪಾಪ ಮತ್ತು ಮರಣದ ನಿಯಂತ್ರಣದಲ್ಲಿ ಬಂಧಿಗಳಾದ ಮಾನವ ಕುಟುಂಬವು ದೇವರ ವಾಗ್ದಾನಗಳ ಬಲದ ಮೇಲೆ ಆತುಕೊಂಡಿದ್ದು **"ಸುನಿರೀಕ್ಷೆಯುಂಟಾದ** ಸೆರೆಯವರು" ಎಂದು ಹೇಳಲಾಗುತ್ತಿದೆ.

ಪಾಪ ನಿವೃತ್ತಿ ಮುಂತಾದವುಗಳ ಒಂದು ಸೂಚನೆಯು ದಂಡನೆಯನ್ನು ವಿಧಿಸುವ ಸಮಯದಲ್ಲಿಯೇ ಅಂದರೆ **"ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ"** (ಆದಿಕಾಂಡ 3:15) ಎಂದು ಆ ಸರ್ಪವನ್ನು ದೇವರು ಶಪಿಸುವ ಸಮಯದಲ್ಲಿ ನೀಡಲಾಗಿತ್ತು. ಈ ಅಂಧಕಾರವಾದ ಸಾಮ್ಯರೂಪದ ಮಾತುಗಳಲ್ಲಿ ಕರ್ತನು ಸೈತಾನನ ಶಕ್ತಿಯು ಹಿಮ್ಮುಖವಾಗುವ ಮತ್ತು ಆದಾಮನ ಸಂತಾನದವರಿಗೆ ಉಂಟಾಗುವ ವಿಜಯದ ಬಗ್ಗೆ ಹೇಳಿದ್ದಾನೆ. ನಮಗೆಲ್ಲರಿಗೂ ತಿಳಿದಿರುವಂತೆ ಯೇಸು ಕ್ರಿಸ್ತನಲ್ಲಿ ಈ ಸ್ತ್ರೀ ಸಂತತಿಯ ಬಗ್ಗೆ ನೆರವೇರಿತು. ಮಾನವನನ್ನು ಕೆಳದರ್ಜೆಗೆ ತಳ್ಳಿದ ಸುಮಾರು ನಾಲ್ಕು ಸಾವಿರ ವರ್ಷಗಳ ನಂತರ ದೇವರು ತನ್ನ ಒಬ್ಬನೇ ಮಗನನ್ನು ಕಳುಹಿಸಿಕೊಟ್ಟನು. ಆತನು ಸ್ತ್ರೀಯೊಬ್ಬಳ ಉದರದಲ್ಲಿ ಜನಿಸುವುದರ ಮೂಲಕ ತನ್ನನ್ನು ಆ ಶಾಪಗ್ರಸ್ತ ಸಂತಾನನ ಸದಸ್ಯನನ್ನಾಗಿ ಗುರುತಿಸಿಕೊಂಡನು. ಆತನು ದೇವರ ಕೃಪೆಯಿಂದ ಎಲ್ಲಾ ಮಾನವರ ಪರವಾಗಿ ಮರಣವನ್ನು ಸವಿದನು, ಎಲ್ಲರ ದಂಡನೆಯನ್ನು ಅನುಭವಿಸಿದನು, ಎಲ್ಲರ ಮೇಲಿದ್ದ ಶಾಪ ಮತ್ತು ಮರಣದಂಡನೆಯನ್ನು ಹಿಂತಿರುಗಿಸಿದನು. ಎಲ್ಲರಿಗೂ ಜೀವದ ಕಾನೂನು ನ್ಯಾಯ ಸಮ್ಮತವಾಗಿ ದೊರೆಯುವಂತೆ ಮಾಡಿದನು. ಇದನ್ನು ಪಾಲಿಸಿದಲ್ಲಿ ನಿತ್ಯಜೀವವೆಂಬ ಬಹುಮಾನವು ದೊರೆಯುತ್ತದೆ.

ಆದರೆ, ದೇವರಿಗೆ ತನ್ನ ಮಗನನ್ನು ಕಳುಹಿಸುವ ಮತ್ತು ಮಾನವ ಜನಾಂಗವನ್ನು ಮರಣದಂಡನೆಯಿಂದ ವಿಮೋಚಿಸುವ ಸಮಯವು ಬರುವ ಮೊದಲು ಆತನು ಅಬ್ರಹಾಮ ಮತ್ತು ಇಸ್ರಾಯೇಲ್ಯರೆಂದು ನಂತರದಲ್ಲಿ ಕರೆಯಲ್ಪಟ್ಟ ಆತನ ಕುಟುಂಬದೊಡನೆ ಒಂದು ವಿಚಿತ್ರವಾದ ವ್ಯವಹಾರವನ್ನು ಕೈಕೊಂಡನು. ಮೊದಲಿಗೆ ಅಬ್ರಹಾಮ, ಇಸಾಕ ಮತ್ತು ಯಾಕೋಬರಿಗೆ ಹೆಚ್ಚು ಕಡಿಮೆ ಕೂಲಂಕುಷವಾಗಿ ಇಡೀ ಮಾನವ ಕುಟುಂಬವನ್ನು ಆಶೀರ್ವದಿಸುವ ತನ್ನ ಔದಾರ್ಯ ಪೂರಕವಾದ ಉದ್ದೇಶವನ್ನು ತಿಳಿಸುತ್ತಾನೆ. ಇದೇ ಜನಾಂಗವನ್ನು ಶಿಕ್ಷಿಸಿದ ನ್ಯಾಯಾಧಿಪತಿಯಿಂದಲೇ ಇಂತಹ ಪ್ರಕಟನೆ ಹೊರಬಂದದ್ದು ಬಹಳ ಅರ್ಥಗರ್ಭಿತವಾದುದು. ಒಂದೋ ಶಾಪ ಅಥವಾ ದಂಡನೆಯನ್ನು ತೆಗೆಯುವ ಈ ಕಾರ್ಯ ನ್ಯಾಯದ ಉಲ್ಲಂಘನೆ ಎನಿಸುತ್ತದೆ, ಆದರೆ ಅದು ಇಲ್ಲವಾದಲ್ಲಿ ಈ ವಿಶ್ವದ ಪರಮೋಚ್ಚ ನ್ಯಾಯಾಲಯಕ್ಕೆ ಇರುವ ಯೋಜನೆಯ ಮೂಲಕವಾಗಿ ಅದು ನ್ಯಾಯವಾಗಿರುವುದಾಗ್ಯೂ ಜನಾಂಗದ ಅರ್ಹರಾದ ಸದಸ್ಯರಿಗೆ ನೀತಿಯುತ ವ್ಯವಸ್ಥೆಯೊಂದಿಗೆ ಸಾಮರಸ್ಯವನ್ನು ಉಂಟುಮಾಡುವುದರ ಮೂಲಕ ಕರುಣೆ ತೋರಿಸುವುದಾಗಿದೆ ಎನ್ನಿಸುತ್ತದೆ. ಮೂಲ ಪಿತೃಗಳು ಈ ವಾಗ್ದಾನಗಳಿಂದ ಆನಂದಭರಿತರಾದರು ಮತ್ತು ಸತ್ತವರು ಪುನರುತ್ಥಾನಗೊಂಡು ಹೊಂದಿಕೊಳ್ಳಲಿರುವ ಭಾವೀ ಜೀವನವನ್ನು ಹೆಚ್ಚು ಕಡಿಮೆ ಗ್ರಹಿಸಿದರು. ಇದು ಅವರಿಗೆ ಮತ್ತು ಅವರ ಮುಂದಿನ ಪೀಳಿಗೆಯವರಿಗೆ ಆಗುವ ಲಾಭ ಮಾತ್ರವಲ್ಲ, ಸೃಷ್ಟಿಯ ಪ್ರತಿಯೊಂದು ಜೀವಿಗಳಿಗೆ ಆಶೀರ್ವಾದವನ್ನು ಉಂಟು ಮಾಡುವುದಾಗಿದೆ.

ಅಬ್ರಹಾಮನಿಗೆ ಮಾಡಿದ ಈ ವಾಗ್ದಾನವನ್ನು ದೃಷ್ಟಿಯುಲ್ಲಿಟ್ಟುಕೊಂಡು ಆತನ ಸಂತತಿಯುವರಾದ ಇಸ್ರಾಯೇಲ್ಯರಿಗೆ ಒಂದು ವಿಶೇಷವಾದ ಕಾನೂನನ್ನು ದೇವರು ಸಿನಾಯ್ ಪರ್ವತದಲ್ಲಿ ನೀಡಿದನು. ಈ ಧರ್ಮಶಾಸ್ತ್ರೀಯವಾದ ಕಟ್ಟಳೆಗಳು ಅವರೊಂದಿಗೆ ಮಾಡಿಕೊಂಡ ಒಡಂಬಡಿಕೆಯ ತಳಹದಿಯಾಗಿದೆ. ಅವರು ಆ ಕಾನೂನುಗಳನ್ನು ಪಾಲಿಸಿದಲ್ಲಿ ಎಲ್ಲಾ ವಾಗ್ದಾನಗಳೂ ಅವರದಾಗುವುದು. ಯಾಕೆಂದರೆ, ಆ ಕಾನೂನು ಸಮರ್ಪಕವಾಗಿ, ಸರಿಯಾಗಿವೆ ಮತ್ತು ಅದರ ಎಲ್ಲಾ ವಿವರಣೆಗಳೂ ಒಳ್ಳೆಯದಾಗಿವೆ ಎಂದು ಪರಿಗಣಿಸಲಾಗಿದೆ. ಆದರೆ, ಇಸ್ರಾಯೇಲ್ಯರು ಪತನಗೊಂಡವರು, ನೀತಿಭ್ರಷ್ಟರು, ಅಸಂಪೂರ್ಣರೂ ಆದ ಕಾರಣ ಮೊದಲಿಗೆ ಮೋಶೆಯ ಮಧ್ಯಸ್ಥಿಕೆಯನ್ನು ನೇಮಿಸಬೇಕಾಯಿತು. ಎರಡನೆಯದಾಗಿ, ಕಾನೂನು ಉಲ್ಲಂಘನೆಯನ್ನು ವರ್ಷಕ್ಕೊಮ್ಮೆ ಸಾಂಕೇತಿಕವಾಗಿ ನಿವಾರಿಸಿಕೊಳ್ಳುವ ಸಲುವಾಗಿ ಒಂದು ಮಾರ್ಗವನ್ನು ಕಂಡು, ಈ ರೀತಿಯಲ್ಲಿ ಅವರು ಕಾನೂನನ್ನು ಪರಿಪಾಲಿಸುವ ತಮ್ಮ ಪ್ರಯತ್ನವನ್ನು ಸಂತತಿಯಿಂದ ಸಂತತಿಗೆ ಮುಂದುವರಿಸುವ ಅವಕಾಶ ದೊರೆಯುವಂತಾಯಿತು. ಮೋಶೆಯ ಮಧ್ಯಸ್ಥಿಕೆ

ಮತ್ತು ಪಾಪ ನಿವಾರಣೆಗಾಗಿ ಸಾಂಕೇತಿಕ ಯಜ್ಞಗಳ ಸ್ಥಾಪನೆ ಮುಂತಾದವುಗಳು ಈ ಒಡಂಬಡಿಕೆ ಮತ್ತು ಕಾನೂನುಗಳನ್ನು ಪಡೆದವರು ಅದನ್ನು ಪಾಲಿಸಲು ಮತ್ತು ಅವಕ್ಕೆ ಸಂಪೂರ್ಣವಾದ ವಿಧೇಯತೆಯನ್ನು ತೋರಿಸಲು ಅಶಕ್ತರು ಎಂಬುದನ್ನು ತೋರಿಸುತ್ತದೆ. ಇದು ಏದೇನ್ ತೋಟದಲ್ಲಿ ನೀಡಿದ ನಿಯಮಕ್ಕೆ ಭಿನ್ನವಾಗಿದೆ. ಯಾಕೆಂದರೆ, ಅಲ್ಲಿ ಯಾವ ಮಧ್ಯಸ್ಥಗಾರನನ್ನೂ ಒದಗಿಸಿರಲಿಲ್ಲ ಮತ್ತು ದೈಹಿಕ ಬಲಹೀನತೆಗೆ ಯಾವ ವ್ಯವಸ್ಥೆಯಾಗಲೀ ಇರಲಿಲ್ಲ. ಈ ಸತ್ಯ ಸಂಗತಿ ಮಾತ್ರವೇ ನಮಗೆ ಪ್ರಶ್ನಾತೀತ ಭಾಷೆಯಲ್ಲಿ ಮೊದಲನೆಯ ಆದಾಮನು ದೇವರ ಸ್ವರೂಪದಲ್ಲಿ ಪರಿಪೂರ್ಣವಾಗಿಯೇ ಸೃಷ್ಟಿಸಲ್ಪಟ್ಟಿದ್ದನು ಮತ್ತು ಆತನು ದೇವರ ಆಜ್ಞೆಗಳನ್ನು ಯಥಾವತ್ತಾಗಿ ಪಾಲಿಸಲು ಶಕ್ತನಾಗಿದ್ದನು ಎಂದು ತಿಳಿಸುತ್ತದೆ. ಆದರೆ ಆತನ ಸಂತಾನವು ಈ ಮಧ್ಯೆ ಬಹಳವಾಗಿ ಪತನಗೊಂಡಿತು. ಯಾಕೆಂದರೆ ಮೋಶೆಯ ಧರ್ಮಶಾಸ್ತ್ರದಲ್ಲಿನ ವ್ಯವಸ್ಥೆಯು ಪತನಗೊಂಡ ನೀತಿಭ್ರಷ್ಟರಿಗೆ ಅನುರೂಪವಾಗಿತ್ತು.

ಇದಲ್ಲದೆ ಅಪೋಸ್ತಲನು ನಮ್ಮ ಕರ್ತನಾದ ಯೇಸುವಲ್ಲದೆ ಬೇರೆ ಯಾವ ಯೆಹೂದ್ಯನೂ ಈ ಧರ್ಮಶಾಸ್ತ್ರವನ್ನು ಪಾಲಿಸಲು ಸಾಧ್ಯವಾಗಲಿಲ್ಲವಾದುದರಿಂದ ಯೇಸುವು ಮಾತ್ರವೇ ಇಸ್ರಾಯೇಲ್ಯರೊಡನೆ ಮಾಡಿಕೊಂಡ ಧರ್ಮಶಾಸ್ತ್ರದ ಒಡಂಬಡಿಕೆಯ ಪ್ರಯೋಜನ ಪಡೆದನು ಅಥವಾ ಪ್ರಯೋಜನ ಪಡಕೊಳ್ಳಬಲ್ಲನು ಎಂಬ ಭರವಸೆಯನ್ನು ನೀಡುತ್ತಾನೆ. ಆತನ ಮಾತುಗಳೇನೆಂದರೆ "ಯಾವನಾದರೂ ನೇಮನಿಷ್ಟೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ" (ರೋಮಾ. 3:20). ಆದುದರಿಂದ, ಈ ಧರ್ಮಶಾಸ್ತ್ರವು ಎರಡು ಉದ್ದೇಶಗಳನ್ನು ನೆರವೇರಿಸುವಂತಾಯಿತು. (1) ಪತನಗೊಂಡ ಜನಾಂಗದವರಲ್ಲಿ ಯಾರಿಂದಲೂ ಇವುಗಳನ್ನು ಪಾಲಿಸಲು ಸಾಧ್ಯವಿಲ್ಲ ಮತ್ತು ಅವರು ದೇವರ ದೃಷ್ಟಿಯಲ್ಲಿ ಅಂಗೀಕಾರ ಹೊಂದಲಾರರು. ಮತ್ತು (2) ನಮ್ಮ ಕರ್ತನಾದ ಯೇಸು ಮಾತ್ರವೇ ಪರಿಪೂರ್ಣನು. ಯಾಕೆಂದರೆ ಯಾವ ಅಪೂರ್ಣವಾದ ವ್ಯಕ್ತಿಯೂ ಪಾಲಿಸಲಾಗದ್ದನ್ನು ಆತನು ಮಾತ್ರವೇ ಪಾಲಿಸಿದನು ಆದುದರಿಂದ ಆತನು ಮಾತ್ರವೇ ಅಬ್ರಹಾಮನೊಡನೆ ಮಾಡಿಕೊಂಡ ಒಡಂಬಡಿಕೆಗೆ ಏಕೈಕ ಭಾಧ್ಯಸ್ಥನಾದನು ಎಂದು ಇದು ಸಾರಿ ಹೇಳುತ್ತದೆ. ಆದುದರಿಂದ ಈತನು ಮುಂತಿಳಿಸಿದ ಅಬ್ರಹಾನ ಸಂತತಿಯವನಾದನು ಮತ್ತು ಆತನ ಮೂಲಕ ಪ್ರಪಂಚದ ಎಲ್ಲಾ ಕುಟುಂಬಗಳೂ ಆಶೀರ್ವಾದ ಪಡಕೊಳ್ಳುವಂತಾಯಿತು. ಈ ರೀತಿಯಲ್ಲಿ ಕ್ರಿಸ್ತನ ಮೂಲಕ ಪೂರೈಸಲ್ಪಟ್ಟ ಆ ಒಡಂಬಡಿಕೆಯ ಆಶೀರ್ವದಿಸಲ್ಪಟ್ಟ ವಾಗ್ದಾನದ ಸಂತತಿ ಸಂಬಂಧವಾಗಿ ರದ್ದಾಯಿತು. ಆದರೆ, ನಾವು ಈ ವಾಗ್ದಾನವನ್ನು ಹಿಂತಿರುಗಿ ಸೂಕ್ಷ್ಮವಾಗಿ ನೋಡುವಾಗ ಕೆಲವು ರೀತಿಯಲ್ಲಿ ಅದು ಎರಡರಷ್ಟಾಗಿದೆ – ವಾಗ್ದಾನದಲ್ಲಿ ತಿಳಿದುಬರುವಂತೆ ಅದು ಒಂದು ಆತ್ಮೀಕ ಪರಲೋಕ ಸಂತಾನವನ್ನೊಳಗೊಂಡಿದೆ ಮತ್ತು ಅದರೊಂದಿಗೆ ಒಂದು ಭೂಲೋಕ ಸಂತಾನವನ್ನೂ ಒಳಗೊಂಡಿದೆ– "ನಿನ್ನ ಸಂತತಿಯನ್ನು ಆಕಾಶದ ನಕ್ಷತ್ರಗಳಂತೆಯೂ, ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು" (ಆದಿಕಾಂಡ 22:17).

ಒಡಂಬಡಿಕೆಯನ್ನು ಪೂರೈಸಿದ ನಮ್ಮ ಕರ್ತನಾದ ಯೇಸುವು ಪ್ರಪಂಚದ ಎಲ್ಲಾ ಕುಟುಂಬಗಳ ಆಶೀರ್ವಾದದ ವಿಷಯವನ್ನು ತನ್ನ ವಶದಲ್ಲಿಟ್ಟುಕೊಂಡಿರುತ್ತಾನೆ; ಆದರೆ ಆತನು ತೆರೆದು ಕಾರ್ಯವೆಸಗುವ ದೈವಿಕ ಯೋಜನೆಯ ಪ್ರಕಾರ ಆತನು ಲೌಕಿಕ ಸಂತಾನದವರಲ್ಲಿ ಕೆಲವರನ್ನು ಅಂದರೆ ಸ್ವಾಭಾವಿಕವಾಗಿ ಭೂಲೋಕದ ಸಂತತಿಯವರಾದ ಇಸ್ರಾಯೇಲ್ಯರನ್ನು ಆಶೀರ್ವಾದ ಕಾರ್ಯದಲ್ಲಿ ತನ್ನ ಭೂಲೋಕದ ಸಾಧನಗಳನ್ನಾಗಿ ಅಥವಾ ನಿಯೋಗಿಗಳನ್ನಾಗಿ ಉಪಯೋಗಿಸಲು ಸಂತೋಷಿಸುತ್ತಾನೆ. ಆದುದರಿಂದ ಇಸ್ರಾಯೇಲ್ಯರಿಗೆ ಮಾಡಿದ ಲೌಕಿಕ ವಾಗ್ದಾನವನ್ನು ಸಂಪೂರ್ಣವಾಗಿ ಬದಿಗಿರಿಸಿಲ್ಲ; ಆದರೆ ಅಪೋಸ್ತಲನು ಸಾರಿ ತಿಳಿಸುವಂತೆ ಕ್ರಿಸ್ತನ ದ್ವಿತೀಯಾಗಮನದಲ್ಲಿ ದೇವರ ರಾಜ್ಯವು ಸ್ಥಾಪಿತವಾದಾಗ ಸ್ವಾಭಾವಿಕ ಇಸ್ರಾಯೇಲ್ಯರಿಗೆ ಆಶೀರ್ವಾದವನ್ನು ಕಾದಿರಿಸಲಾಗಿದೆ. ಈ ಬಗ್ಗೆ ಅಪೋಸ್ತಲನು ಹೇಳುವುದೇನೆಂದರೆ "ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪಪಡುವವನಲ್ಲ" "ಆದರೂ ಅವರು ತಾನು ಆರಿಸಿಕೊಂಡ ಪಿತೃಗಳ ವಂಶಸ್ಥರಾಗಿರುವುದರಿಂದ ಅವರನ್ನು ಪ್ರಿಯರೆಂದು ಎಣಿಸಿದ್ದಾನೆ" "ಅವರು ಈಗ ಅವಿಧೇಯರಾಗಿದ್ದರೂ ನಿಮಗೆ (ಸಭೆಗೆ) ದೊರಕಿದ ಕರುಣೆಯನ್ನು ಹೊಂದುವರು" "ದೇವರು ಎಲ್ಲರಿಗೂ ಕರುಣೆಯನ್ನು ತೋರಿಸುವ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನೂ ಅವಿಧೇಯತೆಯೆಂಬ ದುಃಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ" ಎಲ್ಲಾ ಜನರ ಆಶೀರ್ವಾದದ ಸಲುವಾಗಿ ಬಿಡಿಸುವವನು ಚಿಯೋನಿನಿಂದ ಹೊರಟುಬರುವನು ಎಂಬ ಸಂದೇಶವು ಮೊದಲಿಗೆ ಯಾಕೋಬನಲ್ಲಿನ ಭಕ್ತಿಹೀನತೆಯನ್ನು ನಿವಾರಣೆ ಮಾಡುವುದು. ಆಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆ ಹೊಂದುವುದು" (ರೋಮಾ. 11: 26–32 ನೋಡಿರಿ).

ನಂತರದಲ್ಲಿ ನಾವು ನಮ್ಮ ಕರ್ತನ ಪ್ರಥಮ ಆಗಮನದವರೆಗೆ ಈ ಲೋಕಕ್ಕೆ ನಮ್ಮ ಪತನ ಸ್ಥಿತಿಯ ಹೊರತಾಗಿ ಪ್ರಾಕೃತಿಕವಾದ ಸಾಮಾನ್ಯ ನಿಯಮಗಳಲ್ಲದೆ ಬೇರೆ ಯಾವುದೇ ಕಾನೂನಿರಲಿಲ್ಲ ಎಂದು ನೋಡುತ್ತೇವೆ. ಅಂದರೆ ಬಿದ್ದುಹೋದ ಸೆರೆಮನೆಯಲ್ಲಿರುವ ಸ್ಥಿತಿಯ ಈ ನಿಯಮವು ನಮ್ಮನ್ನು ನಮ್ಮ ತೊಂದರೆಗಳಿಂದ ಪಾರಾಗುವ ಶಕ್ತಿ ನಮ್ಮಲ್ಲಿ ಇಲ್ಲವಾದರೂ ನಾವು ಅವುಗಳಿಗಾಗಿ ತ್ವರೆಪಡಬೇಕು ಎಂದು ಪ್ರಕಟಿಸುವುದಾಗಿತ್ತು. ಮೂಲ ತೀರ್ಪಿನ ಪ್ರಕಾರ ಮರಣವು ನಿಶ್ಚಯ, ಇದರಿಂದ ಪಾರಾಗುವ ಯಾವ ನಿರೀಕ್ಷೆಯೂ ನಮಗಿಲ್ಲ, ಆದರೂ ಸ್ವಲ್ಪಮಟ್ಟಿಗೆ ಅದನ್ನು ತಡೆಹಿಡಿಯಬಹುದಾಗಿದೆ ಮತ್ತು ಅದರ ಕಠೋರತೆಯನ್ನು ಶಮನಗೊಳಿಸಬಹುದಾಗಿದೆ ಎಂದು ಇದು ತಿಳಿಸುವುದಾಗಿದೆ. ಇಸ್ರಾಯೇಲ್ಯರಿಗೆ ನೀಡಲ್ಪಟ್ಟ ಮತ್ತೊಂದು ಕಾನೂನು ಅಥವಾ ನಿಬಂಧನೆಯನ್ನು ಮೋಶೆಯು ಗೌರವಿಸಿ ಅದು ಬೇರೆ ಯಾವ ಜನರಿಗಾಗಲೀ, ಜನಾಂಗಕ್ಕಾಗಲೀ ಸೇರಿದ್ದಲ್ಲ ಎಂದು ತಿಳಿಸುವಂತೆ "ಆತನು (ದೇವರು) ನಮ್ಮ ಪೂರ್ವಿಕರ ಸಂಗಡ ಈ ನಿಬಂಧನೆಯನ್ನು ಮಾಡದೆ ಈಗ ಇಲ್ಲಿ ಜೀವದಿಂದಿರುವ ನಮ್ಮ ಸಂಗಡಲೇ ಇದನ್ನು ಮಾಡಿದನು" (ಧರ್ಮೋ.5:3).ಇಸ್ರಾಯೇಲ್ಯರನ್ನು ನೀತಿನಿರ್ಣಯಿಸುವ ಆ ಕಾನೂನಿನಿಂದ ಅದಕ್ಕೆ ಹೊಂದಿಕೊಂಡಿರುವ

ಆಶೀರ್ವಾದಗಳನ್ನು ಅವರು ಈವರೆಗೆ ಲಾಭವಾಗಿ ಪಡೆದರೆಂದು ನಾವು ನೋಡುತ್ತೇವೆ. ಆದರೆ ನಮ್ಮ ಕರ್ತನೂ, ವಿಮೋಚಕನೂ ಆದ ಯೇಸುಕ್ರಿಸ್ತನ ಹೊರತಾಗಿ ಅವರೆಲ್ಲರೂ ಅದನ್ನು ಪಾಲಿಸುವಲ್ಲಿ ವಿಫಲರಾದರು. ನಾವೀಗ ಈ ಸಂಗತಿಯನ್ನು ಪರಿಶೀಲಿಸಿ ಯಾವ ರೀತಿಯಲ್ಲಿ ದೈವಿಕ ನಿಯಮವು ಕಾರ್ಯಗತವಾಗುತ್ತಿದೆ ಎಂಬುದನ್ನು ಅವಲೋಕಿಸೋಣ.

ನಮ್ಮ ಕರ್ತನಾದ ಯೇಸುವು ತನ್ನ ಮರಣದಲ್ಲಿ ದೈವಿಕ ನಿಯಮಗಳಾದ ಸಿನಾಯ್ ಕಟ್ಟಳೆಗಳನ್ನು ನೆರವೇರಿಸಿದನು. ಸಿನಾಯಿ ನಿಯಮದ ಸಾರಾಂಶವೇನೆಂದರೆ "ನಿನ್ನ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು... ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಮಾರ್ಕ 12:29) ಎಂಬುದೇ. ಪರಲೋಕದ ತಂದೆಯು ಈ ಸಂಗತಿಯನ್ನು ಎಷ್ಟರ ಮಟ್ಟಿಗೆ ವ್ಯವಸ್ಥೆ ಗೊಳಿಸಿದನೆಂದರೆ ಆತನ ಪ್ರಿಯ ಮಗನು ಪರಲೋಕ ವೈಭವಗಳನ್ನು ತ್ಯಜಿಸಿ ಅಸಂಪೂರ್ಣ ಜನರಲ್ಲಿ ಪರಿಪೂರ್ಣ ವ್ಯಕಿಯಾಗಿ ತಂದೆಯ ಮೆಚ್ಚುಗೆಗೆ ಪಾತ್ರರಾದವರಲ್ಲಿ ಮೊದಲಿಗನಾಗಿ ಮಾನವರ ವಿಮೋಚಕನಾದನು. ಇದು ಬಲವಂತವಾಗಿರಲಿಲ್ಲ. ಆತನಿಗೂ ತಾನು ಮೆಚ್ಚಿದ್ದನ್ನು ಆಯ್ಕೆಮಾಡಿಕೊಳ್ಳುವ ಸಂಪೂರ್ಣವಾದ ಸ್ವಾತಂತ್ರ್ಯವಿತ್ತು; ಆದರೆ ಹಾಗೆ ಮಾಡಿದ್ದಲ್ಲಿ ಆತನು ಧರ್ಮಶಾಸ್ತ್ರವನ್ನು ನೆರವೇರಿಸಲು ಸಾಧ್ಯವಿರುತ್ತಿರಲಿಲ್ಲ. ಧರ್ಮಶಾಸ್ತ್ರವು ಅದಕ್ಕೊಳಪಟ್ಟವರೆಲ್ಲರೂ ತಮ್ಮನ್ನು ಪ್ರೀತಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ದೇವರನ್ನು ಅತಿಶಯವಾಗಿ ಪ್ರೀತಿಸಬೇಕು ಮತ್ತು ಹೀಗೆ ಮಾಡುವಲ್ಲಿ ಅವರು ಸಂತೋಷದಿಂದ ತಮ್ಮನ್ನೇ ಅಂದರೆ ತಮ್ಮ ಪ್ರಾಣವನ್ನೇ ಅರ್ಪಿಸಬೇಕಾಗುತ್ತದೆ ಎಂದು ಕಡ್ಡಾಯವಾಗಿ ತಿಳಿಸುತ್ತದೆ.

"ನಿನ್ನ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ, ಪೂರ್ಣಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು" ಎಂಬ ಮಾತುಗಳಲ್ಲಿ ಇದರ ಗ್ರಹಿಕೆಯಾಗುತ್ತದೆ. ದೇವರ ಬಗ್ಗೆ ಇಂತಹ ಪ್ರೀತಿ ಇರುವುದಾದಲ್ಲಿ ಜೀವ ತೆರಲು ಹಿಂದೇಟು ಹಾಕಲಾರರು. ಇದು ದೇವರ ಯೋಜನೆಗೆ ಇಚ್ಛಾಪೂರ್ವಕವಾದ ಸಮರ್ಪಣೆಯಾಗಿದೆ. ಇದರಂತೆ ಮನುಷ್ಯ ರೂಪದಲ್ಲಿದ್ದ ನಮ್ಮ ಕರ್ತನು ದೇವರ ಯೋಜನೆಯನ್ನು ಸ್ಪಷ್ಟವಾಗಿ ಗ್ರಹಿಸಿ ಉದಾರವಾದ ಮನಸ್ಸಿನಿಂದ ತನ್ನನ್ನು ಮಾನವ ಯಜ್ಞವನ್ನಾಗಿ ಸಮರ್ಪಿಸಿಕೊಂಡನು. ಹೌದು! ಆತನು ತನ್ನನ್ನು ಸಂತೋಷದಿಂದ ಅರ್ಪಿಸಿದನು ಎಂದು ಹೀಗೆ ಬರೆದದೆ– "ನನ್ನ ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವುದೇ ನನ್ನ ಸಂತೋಷವು" (ಕೀರ್ತನೆ 40:8). ತನ್ನ ಈ ಲೋಕದಲ್ಲಿನ ಜನನದಿಂದಾಗಿ ಸಂಬಂಧಪಟ್ಟ ಜನರ ಬಗ್ಗೆ ಪ್ರೀತಿಯು ಈ ಪ್ರಕರಣದಲ್ಲಿನ ಒಂದು ಅಂಶ. ಹೀಗಿದ್ದರೂ ಅವರನ್ನು ತನ್ನಂತೆಯೇ ಪ್ರೀತಿಸದೇ ಹೋಗಿದ್ದರೆ ಅವರ ಸಲುವಾಗಿ ಸ್ವ-ಅರ್ಪಣೆ ಮಾಡಲಾಗುತ್ತಿದ್ದಿಲ್ಲ. ಅಂತಹ ಸಮರ್ಪಣೆ ಜನರನ್ನು ತನಗಿಂತ ಮೇಲಾಗಿ ಪ್ರೀತಿಸುವಂತಾಗುತ್ತದೆ. ಮಾನವನಾದ ಕ್ರಿಸ್ತನ ಈ ಅರ್ಪಣೆಯು ಧರ್ಮಶಾಸ್ತ್ರದ ಮೊದಲನೆಯ ಭಾಗದ ನೆರವೇರಿಕೆಯನ್ನೊಳಗೊಂಡಿದೆ. ಇದೆಲ್ಲವೂ ನಾವು ನೋಡುವಂತೆ ಆತನು ಜನಿಸಿದ ಧರ್ಮಶಾಸ್ತ್ರದ ನಿಬಂಧನೆಯನ್ನು ಪಾಲಿಸುವುದೇ ಆಗಿದೆ ಮತ್ತು ಅವುಗಳ ಶರತ್ತುಗಳಿಗೆ ಬದ್ಧವಾದ ಸಂಭವಗಳಾಗಿವೆ. ಆತನು ಮರಣದವರೆಗೆ ವಿಧೇಯನಾಗದ ಹೊರತು ಅಬ್ರಹಾಮನ ವಾಗ್ದಾನಗಳ ವಾರಸುದಾರನಾಗಲು ಸಾಧ್ಯವಿದ್ದಿಲ್ಲ.

ಆದರೆ, ಆತನ ಮರಣದಿಂದ ಆತನು ಅಬ್ರಹಾಮನ ವಾಗ್ದತ್ತ ಸಂತಾನಕ್ಕೆ ಯೋಗ್ಯನು, ಸಮರ್ಥನು ಮತ್ತು ಲೋಕ ಕಲ್ಯಾಣವನ್ನುಂಟು ಮಾಡಲು ಅರ್ಹನು ಎಂದು ರುಜುವಾತಾಗುವುದರೊಂದಿಗೆ ಮತ್ತೊಂದು ಸಂಗತಿಯ ನೆರವೇರಿಕೆ ಸಹಾ ಆಯಿತು. ಅದೇನೆಂದರೆ, ಮೂಲ ಮರಣದಂಡನೆಯಿಂದ ಆದಾಮ ಮತ್ತು ಆತನ ಸಂತಾನದವರ ವಿಮೋಚನೆ. ದೈವಿಕ ವ್ಯವಸ್ಥೆಯಲ್ಲಿ ಈ ಎರಡೂ ಸಂಗತಿಗಳೂ ಒಂದೇ ಸಮರ್ಪಣೆಯಿಂದ ಏಕಕಾಲದಲ್ಲಿ ನೆರವೇರಿದವು. ಆದಾಗ್ಯೂ ನಾವು ಎರಡರ ನಡುವಣ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ತಿಳಿಯಬೇಕಾಗುತ್ತದೆ. ನಮ್ಮ ಕರ್ತನ ಮರಣ ಪರ್ಯಂತ ಧರ್ಮಶಾಸ್ತ್ರದ ನಿಬಂಧನೆಗಳನ್ನು ನೆರವೇರಿಸಿದ್ದು ಮಾತ್ರವಲ್ಲ ಇದಕ್ಕೂ ಅಧಿಕವಾಗಿ ದೈವಿಕ ವ್ಯವಸ್ಥೆಯಿಂದ ಅದೇ ಮರಣದ ಮೂಲಕವಾಗಿ ಆತನು ನೂತನ ಒಡಂಬಡಿಕೆಯೊಂದರ ಹೊಣೆಹೊತ್ತನು. ಧರ್ಮಶಾಸ್ತ್ರದ ನಿಬಂಧನೆಯು ನಾವು ಕಂಡಂತೆ ಆತನ ವೈಯುಕ್ತಿಕ ಅರ್ಹತೆಯನ್ನು ರುಜುವಾತುಗೊಳಿಸಿತು. ಆದರೆ ಈ ನೂತನ ಒಡಂಬಡಿಕೆಯು ಮಾನವಕುಲಕ್ಕೆ ಸಂಬಂಧಿಸಿದೆ. ಮರಣ ದಂಡನೆಯು ಜನಾಂಗದ ಮೇಲಿದ್ದು ಆ ಮೂಲ ದಂಡನೆಯು ತೀರದ ಅಥವಾ ರದ್ದುಗೊಳಿಸದ ಹೊರತು ಒಂದು ಶಾಶ್ವತವಾದ ಆಶೀರ್ವಾದ ಉಂಟಾಗಲು ಸಾಧ್ಯವಿದ್ದಿಲ್ಲ. ಅಲ್ಲಿಯವರೆಗೆ ಯಾರೂ ಆ ಸಂತಾನವನ್ನು ಉದ್ಧರಿಸುವಂತಿರಲಿಲ್ಲ ಅಥವಾ ಯಾರಿಗೂ ಮರಣವನ್ನು ತೊಡೆದು ಹಾಕಿ ಜೀವವನ್ನುಂಟು ಮಾಡುವ ಆಶೀರ್ವಾದವನ್ನು ನೀಡಲು ಅಸಾಧ್ಯವಾಗಿತ್ತು. ಯಾಕೆಂದರೆ, ಆವರೆಗೆ ಮರಣವೆಂಬ ದೇವರ ದಂಡನೆಯು ಅದಕ್ಕೆ ವಿರೋಧವಾಗಿತ್ತು. ದೇವರು ತಪ್ಪು ಮಾಡಿದವರನ್ನು ತನ್ನ ಸ್ವಂತ ನಿಯಮದ ಪ್ರಕಾರ ಮುಕ್ತಗೊಳಿಸುವಂತಿರಲಿಲ್ಲ. ಒಂದೆಡೆ ಜನಾಂಗವನ್ನು ಬಿಡುಗಡೆಮಾಡಲು ಮತ್ತು ಉದ್ಧರಿಸಲು ವಿಮೋಚಕನಿಗಿರುವ ಅರ್ಹತೆಯನ್ನು ಪರೀಕ್ಷಿಸಿದನು, ಆದರೆ ತಂದೆಯಾದ ಆದಾಮನಿಗಾಗಿ ಆ ಮೂಲಕ ಆತನ ಇಡೀ ಸಂತಾನದವರಿಗಾಗಿ ಈಡುಬಲಿಯಾಗಿ ಸ್ವಾಭಾವಿಕ ರೀತಿಯಲ್ಲಿ ಅವಶ್ಯವಾಗಿ ಪಾಪ ಮತ್ತು ಮರಣವನ್ನು ಹಂಚಿಕೊಂಡ ದೇವರ ಅರ್ಥವ್ಯವಸ್ಥೆಯು ಎಷ್ಟೋ ಸುಂದರವಾಗಿದೆ! ನಾವೀಗಾಗಲೇ ಈ ಬಗ್ಗೆ ವಿವರಿಸಿದ್ದೇವೆ* (* ಸಂಪುಟ**5** ಅಧ್ಯಾಯ 14, 15 ನೋಡಿರಿ.)

ನಮ್ಮ ಇಲ್ಲಿಯ ಅಧ್ಯಯನವು ಧರ್ಮಶಾಸ್ತ್ರದ ಸಂಬಂಧವಾಗಿದೆ. ಸಿನಾಯಿ ಕಟ್ಟಳೆಗಳು ಅಬ್ರಹಾಮನ ಸ್ವಾಭಾವಿಕ ಸಂತಾನದವರಿಗೆ ಮಾತ್ರವೇ ವಿಸ್ತರಿಸಲ್ಪಟ್ಟಿದ್ದನ್ನು ನಾವು ಕಂಡಿದ್ದೇವೆ. ಪ್ರಪಂಚದ ಉಳಿದ ಜನರು ದೇವರಿಲ್ಲದೆ, ಯಾವ ನಿರೀಕ್ಷೆಯಿಲ್ಲದೆ, ಪ್ರೋತ್ಸಾಹವಿಲ್ಲದೆ, ಉತ್ತೇಜನವಿಲ್ಲದೆ,

ವಾಗ್ದಾನಗಳಿಲ್ಲದೆ ಅಲೆಮಾರಿಗಳಂತೆ, ಅಪರಿಚಿತರಂತೆ, ಪರಕೀಯರಂತೆ ಬಿಡಲ್ಪಟ್ಟರು (ಎಫೆಸ 2:12) ಸಿನಾಯಿಯ ಕಟ್ಟಳೆಗಳು ಅಂತಿಮದಲ್ಲಿ ದೊಡ್ಡ ಪರೀಕ್ಷೆ ಮತ್ತು ಬಹುಮಾನವನ್ನು ಹೊಂದಿದೆ ಎಂದು ನಾವು ನೋಡುತ್ತೇವೆ. ನೂತನ ಒಡಂಬಡಿಕೆಗೆ ಹೊಣೆ ಉಂಟೆಂದೂ ನಾವು ಈಗಾಗಲೇ ನೋಡಿರುತ್ತೇವೆ (ಇಬ್ರಿಯ 7:22) ಇದು ಕ್ರಿಸ್ತನ ರಕ್ತದಿಂದ ಫಲೋತ್ಪಾದಕವಾಗಿದೆ. ಈ ನೂತನ ಒಡಂಬಡಿಕೆಯು ಕಾರ್ಯ ಸಾಧಕವಾಗಿದೆಯೋ, ಇಲ್ಲವೋ, ಇರುವುದಾದಲ್ಲಿ ಸಿನಾಯಿ ಕಟ್ಟಳೆಗಳೊಂದಿಗೆ ಧರ್ಮಶಾಸ್ತ್ರದ ನಿಬಂಧನೆಗಳಿದ್ದಂತೆ ಈ ನೂತನ ನಿಯಮಗಳೇನಾದರೂ ಇದರೊಂದಿಗೆ ಇದೆಯೋ ಎಂಬುದನ್ನು ನಾವೀಗ ವಿಚಾರಿಸುತ್ತೇವೆ. ನಮ್ಮ ಉತ್ತರವೇನೆಂದರೆ, ಈ ಲೋಕಕ್ಕೆ ಸಂಬಂಧಿಸಿದಂತೆ ಈ ನೂತನ ಒಡಂಬಡಿಕೆಯು ಇನ್ನೂ ಕಾರ್ಯಸಾಧಕವಾಗಿ ಜಾರಿಗೆ ಬಂದಿಲ್ಲ. ಕ್ರಿಸ್ತನ ಎರಡನೆಯ ಆಗಮನದವರೆಗೆ ಇದು ಪೂರ್ಣವಾಗಿ ಜಾರಿಗೊಳ್ಳುವುದಿಲ್ಲ. ನಾವೀಗ ತಾನೇ ಕಂಡುಕೊಂಡಂತೆ ಶಾರೀರಿಕ ಇಸ್ರಾಯೇಲ್ಯರು ಈ ನೂತನ ಒಡಂಬಡಿಕೆಯ ಲಾಭವನ್ನು ಪಡೆಯುವ ಮಾನವಕುಲದ ಮೊದಲಿಗರಾಗುತ್ತಾರೆ.

ಮೂಲ ಶಾಪದ ಸಂಬಂಧವಾಗಿ ನೂತನ ಒಡಂಬಡಿಕೆಯು ಶಾಂತಿಯ ಬಗ್ಗೆ ಮಾತ್ರವೇ ಹೇಳುತ್ತದೆ. ಇದು ವಿಮೋಚಕನಿಂದ ಸಂಪೂರ್ಣವಾಗಿ ನೆರವೇರಿದೆ ಎಂದು ಘೋಷಿಸುತ್ತದೆ. ಆತನ ಮೂಲಕವಾಗಿ ತಂದೆಯ ಬಳಿಗೆ ಬರುವವರೆಲ್ಲರೂ ಸಾಧ್ಯವಾದ ವಿಧೇಯತೆಯ ಮೂಲಕವಾಗಿ ಮೂಲ ದಂಡನೆಯಿಂದ ಸಂಧಾನವನ್ನು ಪಡಕೊಳ್ಳಬಹುದು. ಆದರೆ ಇದು ಅದಕ್ಕೂ ಮೇಲಾಗಿ ಇದು ಧರ್ಮಶಾಸ್ತ್ರದ ನಿಬಂಧನೆಗಳಡಿಯಲ್ಲಿ ಹೆಚ್ಚಾದ ದಂಡನೆಯನ್ನನುಭವಿಸುತ್ತಿರುವ ಶಾರೀರಿಕ ಇಸ್ರಾಯೆಲ್ಯರ ಮೇಲೆ ಕರುಣೆಯನ್ನು ತೋರಿಸುವ ಬಗ್ಗೆ ಹೇಳುತ್ತದೆ. ಹಿಂದಿನ ಪಾಪಗಳ ಬಗ್ಗೆ ಕ್ಷಮಾಪಣೆ ಒದಗುವುದು ಮಾತ್ರವಲ್ಲ ಜನಾಂಗವೂ ಇನ್ನೂ ವೇದನೆಪಡುತ್ತಿರುವ ಎಲ್ಲಾ ಬಲಹೀನತೆ ಮತ್ತು ಅಸಮರ್ಪಕತೆಗಳಿಂದಲೂ ಎಲ್ಲಾ ಜೀವಿಗಳಿಗೆ ವಿಮೋಚನೆ ದೊರೆಯುವುದೆಂದು ಎಲ್ಲರಿಗೂ ತಿಳಿಸುವುದಾಗಿದೆ. ಇಂದಿನಿಂದ ಅವರನ್ನು ಹೇಗಿದ್ದಾರೋ ಹಾಗೆಯೇ ನಡೆಸಿಕೊಳ್ಳಲಾಗುವುದು. ಅವರಿಗೆ ಕ್ರಿಸ್ತನ ಮಧ್ಯಸ್ಥಿಕೆಯ ರಾಜ್ಯದಲ್ಲಿನ ನಿಯಮಗಳ ಪ್ರಕಾರ ಪ್ರಸ್ತುತ ಮಾನಸಿಕ, ನೈತಿಕ, ದೈಹಿಕ ಮರಣ ಮುಂತಾದ ಸ್ಥಿತಿಗಳಿಂದ ಹೆಚ್ಚು ಹೆಚ್ಚಾಗಿ ಮಾನವನ ಪರಿಪೂರ್ಣ ಸಮರ್ಪಕತೆಗೆ ಮೇಲೆತ್ತಲಾಗುವುದು. ಹೀಗೆ ಅವರು ಸರ್ವಶಕ್ತನ ಮುಂದೆ ನ್ಯಾಯತೀರ್ಪಿಗಾಗಿ ನಿಲ್ಲಲು ಶಕ್ತರಾಗುವರು ಮತ್ತು ಆತನ ರಾಜ್ಯಭಾರದ ಕಾನೂನುಗಳ ಅಡಿಯಲ್ಲಿ ತಮ್ಮ ಉತ್ತಮ ಗುಣನಡತೆಯನ್ನು ಅರ್ಹತೆಯನ್ನು ನಿರೂಪಿಸಲು ಶಕ್ತರಾಗುವರು. ಆದುದರಿಂದ ಈ ನೂತನ ಒಡಂಬಡಿಕೆಯು ಧರ್ಮಯುಗದಲ್ಲಿ ಪ್ರಪಂಚದ ಸಕಲ ಮಾನವ ಕುಲಕ್ಕೆ ಉದ್ದೇಶಿಸಿರುವ ದೇವರ ಎಲ್ಲಾ ಕರುಣೆ ಮತ್ತು ಕೃಪೆಗಳನ್ನು ಹೊಂದಿರುತ್ತದೆ. ಈ ನೂತನ ಒಡಂಬಡಿಕೆಯು ಯಾರ ಕಿವಿ ಮತ್ತು ಕಣ್ಣುಗಳು ತೆರೆಯಲ್ಪಟ್ಟು ತಮ್ಮನ್ನು ದೇವರ ಕೃಪೆಗೆ ಒಪ್ಪಿಸಿ ಕೊಡುತ್ತಾರೋ ಅಂಥವರೆಲ್ಲರ ಕ್ಷಮಾಪಣೆ ಮತ್ತು ಆಶೀರ್ವಾದ ಮತ್ತು ಸಂಧಾನದ ಒಡಂಬಡಿಕೆಯಾಗಿರುತ್ತದೆ.

## ನೂತನ ಒಡಂಬಡಿಕೆಯ ಕಾನೂನು

## The Law of the New Covenant

ನೂತನ ಒಡಂಬಡಿಕೆ ಸೇರಿದಂತೆ ಒಂದು ಕಾನೂನಿದೆ. ಇದು ದೇವರ ಬದಲಾಗದ ಕಾನೂನಾಗಿದ್ದು ವಿವಿಧ ಸಮಯುಗಳಲ್ಲಿ ಹೆಚ್ಚುಕಡಿಮೆ ಸ್ಪಷ್ಟವಾದ ಹೇಳಿಕೆ ಗಳನ್ನೊಳಗೊಂಡಿರುತ್ತದೆ. ಅದು ಇನ್ನೂ ಸಹಾ ಪಾಪದ ವಿರುದ್ಧ ದೇವರ ವಿರೋಧವನ್ನು ಮತ್ತು ನೀತಿವಂತರಿಗೆ ದೇವರ ಕೃಪೆ ಮತ್ತು ಆಶೀರ್ವಾದಗಳನ್ನು ಸಾರುವ ನಿಯಮವಾಗಿದೆ. ಈ ನಿರಂಕುಶ ಮಟ್ಟವು ಸಾವಿರ ವರ್ಷಗಳ ಧರ್ಮಯುಗದಲ್ಲಿ ಲೋಕದ ಮುಂದೆ ಸದಾ ಇರುತ್ತದೆ. ಪ್ರತಿಯೊಬ್ಬರೂ ಸಾಧ್ಯವಾದಷ್ಟು ಸಮರ್ಪಕವಾದ ಮಟ್ಟದ ಸಮೀಪಕ್ಕೆ ಬರಬೇಕಾಗುವುದು; ಆದರೆ ವಿಧೇಯರಾಗಲು ಪ್ರಯತ್ನಿಸುವ ಪ್ರತಿಯೊಬ್ಬರಿಗೂ ಆತನ ಬಲಹೀನತೆಗಳಿಗನು ಸಾರವಾಗಿ ಆತನ ಭತ್ಯೆ (ಮನ್ನಣೆ) ದೊರೆಯಲಿದೆ. ಈ ಬಲಹೀನತೆಯು ಪ್ರಸ್ತುತ ಆಶೀರ್ವಾದದಾಯಕ ಪೂರ್ವಸ್ಥಿತಿಯ ಪ್ರಾಪ್ತಿಯಲ್ಲಿ ಆತನು ವಿಧೇಯತೆಯೆಡೆಗೆ ಹಾಕುವ ಹೆಜ್ಜೆಯ ಮೇಲೆ ಹೆಜ್ಜೆಗೆ ಅನುಸಾರವಾಗಿ ಇಲ್ಲದಂತಾಗುವುದು. ಹೀಗಾಗಿ “ನಾನು ಇಸ್ರಾಯೇಲ್ ವಂಶದವರೊಡನೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು – ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿಡುವೆನು, ಅವರ ಹೃದಯಗಳ ಮೇಲೆ ಅವುಗಳನ್ನು ಬರೆಯುವೆನು... ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ” (ಇಬ್ರಿಯ 8:10–12 ಮತ್ತು ಯೆರೆಮಿಾಯ 31: 34) .

ಇಲ್ಲಿ ನಾವು ಹಿಂದಿನ ಪಾಪಗಳನ್ನು ಮತ್ತು ಅಪರಾಧಗಳನ್ನು ತೊಡೆದು ಹಾಕುವುದರ ಬಗ್ಗೆ ನೋಡುತ್ತೇವೆ. ಇದು ಸಹಸ್ರವರ್ಷಗಳ ಯುಗದಲ್ಲಿ ಕ್ರಮೇಣವಾಗಿ ನಡೆಯಲಿರುವ ಕಾರ್ಯ; ಇಲ್ಲಿ ನಾವು ಕ್ರಮವಾಗಿ ಮೂಲಕ್ಕೆ ಹೋಗಲು, ಇಚ್ಚಿಸುವ ಮಾನವರ ಹೃದಯದ ಮೇಲೆ ದೇವರ ಆಜ್ಞೆಗಳನ್ನು ಪುನಃ ಕ್ರಮ ಕ್ರಮವಾಗಿ ಬರೆಯುವ ಕ್ರಿಯೆಯನ್ನೂ ನೋಡುತ್ತೇವೆ. ಮಾನವರ ಗುಣನಡತೆಗಳಲ್ಲಿ ಈ ರೀತಿಯಾಗಿ ದೇವರ ಆಜ್ಞೆಗಳನ್ನು ಬರೆಯುವುದು ಕೇವಲ ಕ್ರಿಸ್ತನ ಆಡಳಿತದ ಆ ಮಹಾ ಸುದಿನದಲ್ಲಿ ದೇವರು ಪ್ರವಾದಿಗಳ ಮೂಲಕ ನುಡಿದ ಎಲ್ಲಾ ಸಂಗತಿಗಳ ಪುನಃಸ್ಥಾಪನೆಯಾಗಲಿದೆ ಎಂದು ಹೇಳುವ ಮತ್ತೊಂದು ವಿಧಾನವಾಗಿದೆ. ಇಲ್ಲಿ ನಾವು “ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು (ಪುನಃ ಬರೆಯಲ್ಪಡುವ ದೇವರ ಆಜ್ಞೆಗಳಿಗೆ ತಮ್ಮನ್ನು ಒಪ್ಪಿಸಿಕೊಡದ ಪ್ರತಿಯೊಂದು ಆತ್ಮವೂ) ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು” (ಅಪೋಸ್ತಲರ ಕೃತ್ಯಗಳು 3:23) ಎಂಬ ಸ್ಪಷ್ಟವಾದ ಹೇಳಿಕೆಗಳನ್ನು ಮರೆಯಲಾಗದು.

ನಾವೀಗ ಹಿಂತಿರುಗೋಣ. ಇದುವರೆಗೆ ನಾವು ಮುಂಬರುವ ಧರ್ಮಯುಗದಲ್ಲಿ ನೆರವೇರಲಿರುವ ನೂತನ ಒಡಂಬಡಿಕೆಯ ಬಗ್ಗೆ ಪರಿಗಣಿಸಿದ್ದೇವೆ. ಆ ಸಮಯದಲ್ಲಿ ಈ ಪ್ರಪಂಚವನ್ನು ವಿಮೋಚಿಸಿದಾತನು ಮಹಾ ಪ್ರವಾದಿಯಂತೆ, ಮಹಾ ಬೋಧಕನಂತೆ ತನ್ನ ಶಕ್ತಿ ಮತ್ತು ಅಧಿಕಾರವನ್ನು ಚಲಾಯಿಸುವನು, ಪುನರ್‌ಸ್ಥಾಪನಾ ಪ್ರಕ್ರಿಯೆಯ ಮೂಲಕ ಈ ಲೋಕವನ್ನು ಆಶೀರ್ವದಿಸುವನು ಜನರ ಹೃದಯಗಳ ಮೇಲೆ

ದೈವ ಲಕ್ಷಣಗಳನ್ನು ಪುನಃ ಬರೆಯುವನು. ಆದಾಗ್ಯೂ ಈಗ ನಾವು ದೇವರ ಧರ್ಮಶಾಸ್ತ್ರವು ನಮ್ಮ ಕರ್ತನಾದ ಕ್ರಿಸ್ತನಲ್ಲಿ ನೆರವೇರಿದ ನಂತರ ರದ್ದಾದದ್ದು ಮತ್ತು ಧರ್ಮಯುಗದಲ್ಲಿ ನೂತನ ಒಡಂಬಡಿಕೆಯು ಉಧ್ಘಾಟನೆಗೊಂಡದ್ದು ಇವುಗಳ ಮಧ್ಯಕಾಲದ ಬಗ್ಗೆ ವಿಚಾರಿಸುತ್ತೇವೆ. ಈ ಮಧ್ಯಕಾಲದ ಬಗ್ಗೆ ಏನು? –ಇಲ್ಲಿ ಯಾವುದಾದರೂ ಒಡಂಬಡಿಕೆಯು ಜಾರಿಯಲ್ಲಿತ್ತೋ? ಇರುವುದಾದಲ್ಲಿ ಇದರೊಂದಿಗೆ ಯಾವುದಾದರೂ ನಿಯಮವು ಸಂಬಂಧಿಸಿದೆಯೋ? ನಾವು ಉತ್ತರಿಸುವುದೇನೆಂದರೆ, ಈ ಮಧ್ಯಂತರ ಕಾಲವಾದ ಸುವಾರ್ತಾಯುಗದಲ್ಲಿ ಕರ್ತನು ನೂತನ ಸೃಷ್ಟಿಗಳನ್ನು ಆಯ್ಕೆಮಾಡುತ್ತಾನೆ, ಈಗ ಒಂದು ಒಡಂಬಡಿಕೆಯು ಜಾರಿಯಲ್ಲಿದೆ. ಇದರಲ್ಲಿ ಒಂದು ನಿಯಮವಿದೆ. ಇದನ್ನು ಮೆಚ್ಚಿಕೊಳ್ಳಬೇಕಾದಲ್ಲಿ ನಾವೀಗ ಅಪೊಸ್ತಲನ ಈ ಮಾತುಗಳನ್ನು ನೆನಪಿಗೆ ತಂದುಕೊಳ್ಳಬೇಕಾಗುವುದು – "ವಾಗ್ದಾನದಲ್ಲಿ ಸೂಚಿಸಿದಾತನು ಹುಟ್ಟಿಬರುವ ತನಕ ದೇವರು ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ ಅದನ್ನು ವಾಗ್ದಾನಗಳ ತರುವಾಯ ಸೇರಿಸಿದನು" (ಗಲಾತ್ಯ 03:19). ಧರ್ಮಶಾಸ್ತ್ರದ ನಿಬಂಧನೆಯು ಸಿನಾಯಿಬೆಟ್ಟದಲ್ಲಿ ಮೋಶೆಯ ಮೂಲಕ ನೀಡಲಾಯಿತು. ನಂತರದಲ್ಲಿ ಹಿಂದಿನ ನಿಬಂಧನೆಗೆ ಮತ್ತೊಂದು ಹೆಚ್ಚಾದ ನಿಯಮವನ್ನು ನೋಡುತ್ತೇವೆ. ಅಬ್ರಹಾಮನಿಗೆ ಕೊಟ್ಟ ಒಡಂಬಡಿಕೆಯು ಮೂಲವಾದುದು, ಧರ್ಮಶಾಸ್ತ್ರದ ಒಡಂಬಡಿಕೆಯನ್ನು ಸೇರಿಸುವ ಮುನ್ನ 430 ವರ್ಷದಿಂದ ಜಾರಿಯಲ್ಲಿತ್ತು. ಅಪೊಸ್ತಲನು ಈ ನಿಯಮದ ಬಗ್ಗೆ ಗಮನವನ್ನು ಸೆಳೆಯುತ್ತಾನೆ– "ದೇವರು ಮೊದಲು ಸ್ಥಿರಪಡಿಸಿದ ಒಡಂಬಡಿಕೆಯನ್ನು ನಾನೂರ ಮೂವತ್ತು ವರ್ಷಗಳ ಮೇಲೆ ಬಂದ ಧರ್ಮಶಾಸ್ತ್ರವು ರದ್ದು ಮಾಡಿ ಆ ವಾಗ್ದಾನವನ್ನು ವ್ಯರ್ಥಮಾಡುವುದಿಲ್ಲ" (ಗಲಾತ್ಯ 3:17).

ಈ ರೀತಿಯಲ್ಲಿ ಧರ್ಮಶಾಸ್ತ್ರದ ನಿಬಂಧನೆಗಳು ಕರ್ತನಾದ ಯೇಸುಕ್ರಿಸ್ತನ ಮೂಲಕ ನೆರವೇರಿದ ಮೇಲೆ ಅಬ್ರಹಾಮನಿಗಾದ ಮೂಲ ಒಡಂಬಡಿಕೆಯು, ಧರ್ಮಶಾಸ್ತ್ರದ ಒಡಂಬಡಿಕೆಯು ಅದಕ್ಕೆ ಕೂಡಿಸಲ್ಪಡುವ ಮೊದಲು ಇದ್ದಂತೆಯೇ ಇರುವುದನ್ನು ನಾವು ಕಾಣುತ್ತೇವೆ. ಇದೇ ಅಬ್ರಹಾಮನ ನಿಬಂಧನೆಗಳ ಮೇಲೆಯೇ ನೂತನ ಒಡಂಬಡಿಕೆಯು ಅಭಿವೃದ್ಧಿ ಪಡಕೊಂಡಿತು. ಅಬ್ರಹಾಮನ ವಾಗ್ದಾನ ಅಥವಾ ಒಡಂಬಡಿಕೆ ಈ ರೀತಿಯಾಗಿದೆ– "ನಿನ್ನ ಮತ್ತು ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು" (ಆದಿ. 12:3 ನೋಡಿರಿ). ಈ ವಾಗ್ದಾನದಲ್ಲಿ ಹೇಳಿರುವ ಸಂತತಿಯು ಯೇಸುಕ್ರಿಸ್ತನನ್ನು ಸೂಚಿಸುತ್ತದೆಂದು ಹೀಗೆ ಅಪೊಸ್ತಲನು ವಿವರಿಸುತ್ತಾನೆ– "ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ" (ಗಲಾತ್ಯ 3:16) "ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯುವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (ಗಲಾತ್ಯ 3:29) .

ಹಾಗಾದರೆ ಈಗ ನಮಗೆ ನಮ್ಮ ಪರಸ್ಪರ ಸ್ಥಾನವಿದೆ. ಯಾಕೆಂದರೆ "ಸಹೋದರರೇ, ಇಸಾಕನಂತೆಯೇ ನೀವೂ ಸಹಾ ವಾಗ್ದಾನದ ಮಕ್ಕಳಾಗಿದ್ದೀರಿ" ಎಂದು ಅಪೊಸ್ತಲನು ಪುನಃ ಹೇಳುತ್ತಾನೆ. ಇದು ಧರ್ಮಶಾಸ್ತ್ರದ ಪ್ರಕಾರ ಯೆಹೂದ್ಯರು ಇರುವುದಕ್ಕಿಂತ ಪೂರ್ಣವಾಗಿ ಭಿನ್ನವಾಗಿದೆ. ಆತನು ಆತ್ಮೀಕ ಇಸ್ರಾಯೇಲ್ಯರಿಗೂ, ಸಾಶ್ವಭಾವಿಕ ಇಸ್ರಾಯೇಲ್ಯರಿಗೂ ಇರುವ ವ್ಯತ್ಯಾಸವನ್ನು ತೋರಿಸಿಕೊಡುತ್ತಾನೆ. "ನಂಬುವವರೇ ಅಬ್ರಹಾಮನ ಮಕ್ಕಳೆಂದು ತಿಳಿದುಕೊಳ್ಳಿರಿ" (ಗಲಾತ್ಯ 3:7) ಎಂದು ಹೇಳುವುದರ ಮೂಲಕ ಯಾಕೋಬನ ದೈಹಿಕ ಮಕ್ಕಳು ವಾಗ್ದಾನದಲ್ಲಿ ಹೇಳಿರುವ ಅಬ್ರಹಾಮನ ವಾಗ್ದಾನದ ಸಂತತಿಯುವರಲ್ಲ, ಆದರೆ ನಂಬಿಕೆಯು ಮಕ್ಕಳೇ ಸಂತತಿಯವರೆಂದು ಪರಿಗಣಿಸಲ್ಪಡುತ್ತಾರೆ ಎಂದು ಆತನು ಹೇಳಿದ ಹಾಗಾಯಿತು. ಅಬ್ರಹಾಮನು ಪರಲೋಕದ ತಂದೆಯ ಪ್ರತಿರೂಪದಂತಿದ್ದಾನೆ, ಆತನ ಹೆಂಡತಿಯಾದ ಸಾರಳು ಈ ಮೂಲ ವಾಗ್ದಾನದ ಪ್ರತಿರೂಪವಾಗಿದ್ದು ಆಕೆಯ ಮೂಲಕವಾಗಿ ಬಹಳಷ್ಟು ಆಶೀರ್ವಾದವು ಅಂತಿಮವಾಗಿ ಹೊರಟಿತು ಎಂದು ಆತನು ವಿವರಿಸುತ್ತಾನೆ. ಆದರೆ ಆ ಸಮಯದಲ್ಲಿ ಸಾರಳು ಬಂಜೆಯಾಗಿದ್ದರಿಂದ ಸಂತತಿಯನ್ನು ತರುವಲ್ಲಿ ವಿಫಲಳಾಗಿದ್ದಳು. ಈ ರೀತಿಯಲ್ಲಿ ದೇವರ ವಾಗ್ದಾನವು ಸಹಾ ಸುಮಾರು ಎರಡು ಸಾವಿರವರ್ಷಗಳವರೆಗೆ ಬರಡಾಗಿತ್ತು. ಆದರೆ ಇದು ನಮ್ಮ ಕರ್ತನು ಸತ್ತವರಿಂದ ಪುನರುತ್ಥಾನ ಹೊಂದಿದಾಗ ವಾಗ್ದಾನದ ಸಂತತಿಯನ್ನು ತರುವುದಾಯಿತು. ಅಲ್ಲಿ ಅಬ್ರಹಾಮನ ಸಂತತಿಯ ಅಧಿಪತಿಯು ಜನಿಸಲ್ಪಟ್ಟಿತು, ಅಂತಿಮದಲ್ಲಿ ಇಸಾಕನ ಪ್ರತಿಸಂಕೇತನಾದ ಕ್ರಿಸ್ತನ ಸಮಗ್ರ ಶರೀರವು ಆತ್ಮೀಕ ಪರಿಸ್ಥಿತಿಗೆ ವಿಮೋಚಿಸಲ್ಪಟ್ಟಿತು (ಸತ್ತವರೊಳಗಿಂದ ಜೀವಿತರಾಗಿ ಎಬ್ಬಿಸಲ್ಪಟ್ಟಿತು). ಈ ಸಂತಾನವು ಬಂದ ಮೇಲೆ ವಾಗ್ದಾನವು ಅಥವಾ ಒಡಂಬಡಿಕೆಯು ಪೂರೈಸಲ್ಪಟ್ಟು ಭೂಲೋಕದ ಎಲ್ಲಾ ಕುಟುಂಬಗಳೂ ಆಶೀರ್ವದಿಸಲ್ಪಡುವವು.

ಮೂಲ ಒಡಂಬಡಿಕೆಯು ಬರಡಾದ ಸಮಯದಲ್ಲಿ ಮತ್ತೊಂದು ಒಡಂಬಡಿಕೆಯು ಅದಕ್ಕೆ ಕೂಡಿಸಲ್ಪಟ್ಟಿತು. ಅದು ಯಾವುದೆಂದರೆ ಸಿನಾಯಿ ಅಥವಾ ಯೆಹೂದ್ಯ ಒಡಂಬಡಿಕೆ ಅಥವಾ ಆಜ್ಞಾಶಾಸನದ ಒಡಂಬಡಿಕೆ. ದೇವರ ವಾಗ್ದಾನಗಳಂತಲ್ಲದ, ಮೂಲ ವಾಗ್ದಾನವನ್ನು ಪೂರೈಸದ ರೀತಿಯಲ್ಲಿ ಅದು ಶಾರೀರಿಕ ಮಕ್ಕಳನ್ನು ಉಂಟುಮಾಡಿತು. ಈ ಧರ್ಮಶಾಸ್ತ್ರದ ನಿಬಂಧನೆಗಳು ಸಾರಳ ದಾಸಿಯಾದ ಹಾಗರಳಲ್ಲಿ ಪ್ರತಿರೂಪಗೊಂಡಿದೆಯೆಂದು ಅಪೊಸ್ತಲನು ಸೂಚಿಸುತ್ತಾನೆ. ಈ ಧರ್ಮಶಾಸ್ತ್ರದಡಿಯಲ್ಲಿರುವ ಯೆಹೂದ್ಯರು ಆಕೆಯ ಮಗನಾದ ಇಷ್ಮಾಯೇಲನಲ್ಲಿ ಪ್ರತಿರೂಪಗೊಳ್ಳುತ್ತಾರೆ. ಆದುದರಿಂದ ದಾಸಿಯ ಮಗನು ಧರ್ಮಪತ್ನಿಯ ಮಗನೊಡನೆ ವಾರಸುದಾರನಾಗಲು ಸಾಧ್ಯವಿಲ್ಲವೆಂದು ಕರ್ತನು ಹೇಳುತ್ತಾನೆ. (ಆದಿ. 21:10 ಮತ್ತು ಗಲಾತ್ಯ4:30). ಪ್ರತಿಸಂಕೇತವಾಗಿ ಧರ್ಮಶಾಸ್ತ್ರದ ನಿಬಂಧನೆಗಳಡಿಯಲ್ಲಿರುವ ಯೆಹೂದ್ಯರು ಅಬ್ರಹಾಮನ ಮೂಲ ವಾಗ್ದಾನದ ಬಾಧ್ಯತೆಯನ್ನು ಪಡಕೊಳ್ಳುವುದಿಲ್ಲ. ಅದು ಆತ್ಮೀಕ ಸಂತಾನಕ್ಕಷ್ಟೇ ದೊರೆಯುವುದು ಎಂಬುದು ಇದರ ಅರ್ಥ. ಇವೆಲ್ಲವೂ ವಿವರವಾಗಿಯೂ ಸುಂದರವಾಗಿಯೂ ಗಲಾತ್ಯ 4ನೇ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿವೆ. ಅಬ್ರಹಾಮನ ಮೂಲ ವಾಗ್ದಾನಗಳ ವಾರಸುದಾರರಾಗಲು ಕ್ರೈಸ್ತರು ಯೆಹೂದ್ಯರಾಗಬೇಕು ಅಥವಾ ಮೋಶೆಯ ಶಾಸನದಡಿಯಲ್ಲಿ

ಇರಬೇಕೆಂಬ ತಪ್ಪಾದ ಬೋಧನೆಗೆ ವಿರೋಧವಾಗಿ ಅಪೋಸ್ತಲನು ಈ ವಾಗ್ವಾದವನ್ನು ಮಾಡಿರುತ್ತಾನೆ.

ಇದಕ್ಕೆ ವಿರೋಧವಾಗಿ ಪೌಲನು ಯಾರು ಯಾರು ಇನ್ನೂ ಧರ್ಮಶಾಸ್ತ್ರದ ಅಧೀನದಲ್ಲಿದ್ದಾರೋ ಅವರೆಲ್ಲರೂ ದಾಸತ್ವದಲ್ಲಿದ್ದಾರೆಂದು ಪೌಲನು ತೋರಿಸಿಕೊಡುತ್ತಾನೆ. ಅಬ್ರಹಾಮನ ಆತ್ಮೀಕ ಸಂತತಿಯು ಇಸಾಕನಂತೆ ಮುಕ್ತವಾಗಿರಬೇಕು. ಇಷ್ಮಾಯೇಲನು ಹಾಗಿರಲಿಲ್ಲ. ಆತನು ಈ ವಾಗ್ವಾದವನ್ನು ಮುಂದುವರಿಸುತ್ತಾ ಮೊದಲಿಗೆ ಧರ್ಮಶಾಸ್ತ್ರದ ಅಧೀನದಲ್ಲಿಲ್ಲದ ಯಾವ ಅನ್ಯನಾದರೂ ತನ್ನನ್ನು ಸಿನಾಯಿ ಧರ್ಮಶಾಸ್ತ್ರದ ನಿಬಂಧನೆಗಳಿಗೆ ಒಪ್ಪಿಸಿಕೊಟ್ಟಲ್ಲಿ ಅಂಥವನು ತನ್ನನ್ನು ಅಬ್ರಹಾಮನ ನಿಜವಾದ ಸಂತತಿಯಿಂದ ಬೇರ್ಪಡಿಸಿಕೊಂಡು ಇಸ್ಮಾಯೇಲನ ಪ್ರತಿರೂಪವಾಗಿ ಮಾಡಿಕೊಳ್ಳುತ್ತಾನೆ ಎಂದು ಹೀಗೆ ಹೇಳುತ್ತಾನೆ–"ಕ್ರಿಸ್ತನು ನಮ್ಮನ್ನು ಸ್ವಾತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರುಗಿ ಸಿಕ್ಕಿಹಾಕಿಕೊಳ್ಳಬೇಡಿರಿ. ನೋಡಿರಿ ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ – ನೀವು ಸುನ್ನತಿ ಮಾಡಿಸಿಕೊಂಡರೆ ನಿಮಗೆ ಏನೂ ಪ್ರಯೋಜನವಿಲ್ಲ. ಸುನ್ನತಿ ಮಾಡಿಸಿಕೊಳ್ಳುವ ಪ್ರತಿಯೊಬ್ಬನಿಗೆ–ನೀನು ಧರ್ಮಶಾಸ್ತ್ರದಲ್ಲಿ ಹೇಳಿರುವುದನ್ನೆಲ್ಲಾ ಮಾಡುವ ಹಂಗಿನಲ್ಲಿದ್ದೀ ಎಂದು ತಿರುಗಿ ಪ್ರಮಾಣವಾಗಿ ಹೇಳುತ್ತೇನೆ. ನಿಮ್ಮಲ್ಲಿ ಯಾರಾರು ಕರ್ಮಗಳಿಂದ ನೀತಿವಂತರಾಗ ಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿಹೋದರು. ಕೃಪಾಶ್ರಯದೊಳಗಿಂದ ಬಿದ್ದುಹೋದರು" (ಗಲಾ.5:1–4).

ಹೀಗಿರುವುದರಿಂದ ನಾವು ನೋಡುವುದೇನಂದರೆ ಕ್ರಿಸ್ತನು ತಲೆಯಾಗಿರುವ ಈ ನೂತನ ಸೃಷ್ಟಿಯ ಮೂಲ ಅಥವಾ ಅಬ್ರಹಾಮನ ಒಡಂಬಡಿಕೆಯ ಪ್ರಕಾರ ಅಬ್ರಹಾಮನ ಸಂತತಿಯಾಗಿದ್ದು ಈ ಲೋಕವನ್ನು ವಿಮೋಚಿಸಿ ಮತ್ತು ಸಮಸ್ತವನ್ನೂ ಸರಿಪಡಿಸಿ ಆಶೀರ್ವದಿಸುವುದಾಗಿದೆ. ಕರ್ತನು ಮತ್ತು ಅಪೋಸ್ತಲನು ತಮ್ಮ ಚಿತ್ರಣದಲ್ಲಿ ಉಪಯೋಗಿಸಿರುವಂತೆ ಈ ನೂತನ ಸೃಷ್ಟಿಯು ಕೆಲವು ಸಮಯ ಪೂರ್ಣ ನಿಲುವಿನ ಮನುಷ್ಯನಂತೆ ಅಂದರೆ, ಶಿರವು ಕ್ರಿಸ್ತನನ್ನು, ದೇಹವು ಸಭೆಯನ್ನು, ಅಂಗಾಗಗಳು ಸಭಾ ಸದಸ್ಯರನ್ನೂ ಪ್ರತಿನಿಧಿಸುವಂತೆ ಕಂಡು ಬಂದಲ್ಲಿ ನಾವು ಆಶ್ಚರ್ಯ ಪಡಬೇಕಾಗಿಲ್ಲ. (ಎಫೆಸ.4:16, ಕೊಲೊಸ್ಸೆ 1:18). ಆದುದರಿಂದ, "ಸಹೋದರರೇ, ಇಸಾಕನಂತೆಯೇ ನೀವು ಸಹಾ ವಾಗ್ದಾನದ ಮಕ್ಕಳಾಗಿದ್ದೀರಿ, ಪ್ರತಿಸಂಕೇತನಾದ ಇಸಾಕನ ಸದಸ್ಯರಿಗೆ ಕ್ರಿಸ್ತನೇ ಶಿರಸ್ಸು" ನಮ್ಮ ಕರ್ತನು ತನ್ನನ್ನು ಮದಲಿಂಗನಂತೆಯೂ, ಆತನ ವಿಶ್ವಾಸಪಾತ್ರವಾದ ಸಭೆಯನ್ನು ಮದುವೆಗಾಗಿ ಕಾಯುತ್ತಿರುವ ತನ್ನ ಮದಲಗಿತ್ತಿಯನ್ನಾಗಿಯೂ ಪ್ರತಿನಿಧಿಸಿಕೊಳ್ಳುತ್ತಾನೆ. ಅಪೋಸ್ತಲರು ಸಹಾ ಇದೇ ಚಿತ್ರಣವನ್ನು ನೀಡುತ್ತಾ– "ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ಆತನಿಗೆ ನಿಶ್ಚಯ ಮಾಡಿದೆನಲ್ಲಾ" (2 ಕೊರಿ. 11:2) "ಅದು ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು" (ಪ್ರಕ. 21:2) ಎಂತಲೂ ಬರೆಯುತ್ತಾರೆ. ಕ್ರಿಸ್ತನು ಹಾಗೂ ಆತನ ಸಭೆಯ ಮದುವೆಯ ಇದೇ ಚಿತ್ರಣದ ಪ್ರತಿರೂಪವು ಅಬ್ರಹಾಮನು ತನ್ನ ಸೇವಕನಾದ ಎಲಿಯೇಜ಼ರ (ಆತನು ಪವಿತ್ರಾತ್ಮನ ಪ್ರತಿಸಂಕೇತವಾಗಿದ್ದಾನೆ)ನನ್ನು ತನ್ನ ಮಗನಾದ ಇಸಾಕನಿಗೆ ಹೆಣ್ಣು ನೋಡಲು ಕಳುಹಿಸಿದಾಗ ಕಂಡುಬರುತ್ತದೆ. (ಆದಿ. 24:2). ರೆಬೆಕ್ಕಳು ಸಂತೋಷದಿಂದ ಕಳುಹಿಸಿದ ಕಾಣಿಕೆಗಳನ್ನು ಸ್ವೀಕರಿಸಿ ಅಂತಿಮವಾಗಿ ಇಸಾಕನ ಕಡೆಗೆ ನಡೆಸಲ್ಪಟ್ಟು ಆಕೆ ಆತನ ಪತ್ನಿಯಾದಳು. ನಾವು ಸಹಾ ದೇವರಿಂದ ಕರೆಯಲ್ಪಟ್ಟವರಾಗಿದ್ದು ಕ್ರಿಸ್ತನೊಂದಿಗೆ ನಿರ್ಲಯದ, ನಿಷ್ಕಳಂಕದ ಬಾಡಿಹೋಗದ ಬಾಧ್ಯತೆಗಳಲ್ಲಿ ಆತನ ಜೊತೆ ವಾರಸುದಾರರಾಗಿದ್ದೇವೆ. ಈ ಯಾವುದೇ ಒಂದು ಚಿತ್ರಣವನ್ನು ನಾವು ಪರೀಕ್ಷಿಸುವುದಾದರೂ ಅದರ ಪಾಠವು ಒಂದೇ – ಕ್ರಿಸ್ತನು, ಶಿರಸ್ಸು ಮತ್ತು ದೇಹ, ಮದಲಿಂಗನು ಮತ್ತು ಮದಲಗಿತ್ತಿ ಒಂದಾಗಿರುವುದು. ಈ ಸಂತತಿಯೇ ಅಬ್ರಹಾಮನ ಒಡಂಬಡಿಕೆಯ ವಾರಸುದಾರರು. ಎಲ್ಲಾ ಆಶೀರ್ವಾದಗಳೂ ಮತ್ತು ಒಳ್ಳೆಯ ಸಂಗತಿಗಳೂ ಇದರಲ್ಲಿ ಅಡಕವಾಗಿವೆ.

ಅಪೋಸ್ತಲನು ಸಾರಿ ತಿಳಿಸುವುದೇನೆಂದರೆ, ಸಿನಾಯಿ ಬೆಟ್ಟ ಮತ್ತು ಈ ಲೋಕದ ಯೆರೂಸಲೇಮ್ ಆತ್ಮೀಕ ಆಶೀರ್ವಾದಗಳನ್ನು ಗಳಿಸಲು ವಿಫಲವಾದ ಸ್ವಾಭಾವಿಕವಾದ ಇಸ್ರಾಯೇಲಿನ ಪ್ರತೀಕವಾಗಿದೆ. ಈ ಆತ್ಮೀಕ ಆಶೀರ್ವಾದಗಳನ್ನು ಹೊಂದಿಕೊಳ್ಳಲು ಯೋಗ್ಯರಾಗಿ ಕಂಡುಬಂದ ಸ್ವಾಭಾವಿಕವಾದ ಇಸ್ರಾಯೇಲಿನ ಶೇಷವು ಇಹಲೋಕ ಸಂಗತಿಗಳ ಮೇಲೆ ಆತುಕೊಂಡಿದ್ದ ಇಸ್ರಾಯೇಲ್ಯರಿಂದ ಪ್ರತ್ಯೇಕಿಸಲ್ಪಟ್ಟು ದೇವರ ನಿಜವಾದ ಇಸ್ರಾಯೇಲಿನ ಸದಸ್ಯರು ದೇವರು ತಾನು ಪ್ರೀತಿಸಿದವರಿಗೆ ಕಾದಿರಿಸಿದ ಪರಲೋಕದ ಸಂಗತಿಗಳಲ್ಲಿ ಪುನರುತ್ಥಾನಗೊಂಡ ಕ್ರಿಸ್ತನ ಜೊತೆ ವಾರಸುದಾರರೂ ಆದರು. ಶಾರೀರಿಕ ಇಸ್ರಾಯೇಲಿನ ಶೇಷವು ಮತ್ತು ದೇವರು ಅನ್ಯಜನರಿಂದ ಕರೆದ ಆತ್ಮೀಕ ವರ್ಗದ ಇತರರು, ಸಿನಾಯಿ ಮತ್ತು ಯೆರೂಸಲೇಮಿಗಿಂತ ಉನ್ನತವಾದ ಸಂಕೇತವಾದರು, ಅಂದರೆ ಚಿಯೋನ್ ಪರ್ವತ ಮತ್ತು ಪರಲೋಕದ ಯೆರೂಸಲೇಮ್. ಇದರ ಮಹಿಮಾ ಚಿತ್ರಣವನ್ನು ನಾವು ಪ್ರಕಟನೆ 21ನೇ ಅಧ್ಯಾಯದಲ್ಲಿ ಕಾಣಬಹುದಾಗಿದೆ.

ನೂತನ ಸೃಷ್ಟಿಯು ದೇವರ ವ್ಯವಸ್ಥೆಯಾಗಿದೆ, ಒಡಂಬಡಿಕೆಗಳು ಸಾಮಾನ್ಯವಾಗಿ ಈ ಲೋಕದಿಂದ ಮಾತ್ರವಲ್ಲ, ಶಾರೀರಿಕ ಇಸ್ರಾಯೇಲ್ಯರಿಂದಲೂ ಬೇರೆ ಮತ್ತು ಭಿನ್ನವಾದವುಗಳು ಮತ್ತು ನೂತನ ಸೃಷ್ಟಿಯು ಸಿನಾಯಿಯ ಧರ್ಮಶಾಸ್ತ್ರ ಒಡಂಬಡಿಕೆಗಳಿಗೆ ಒಳಪಟ್ಟಿಲ್ಲ ಆದರೆ ಮೂಲ ಒಡಂಬಡಿಕೆಗೆ ಮಾತ್ರವೇ ಒಳಪಟ್ಟಿದೆ ಎಂಬ ಸತ್ಯವನ್ನು ಸ್ಥಿರಪಡಿಸಿದ ಮೇಲೆ ನಾವು ಅಬ್ರಹಾಮನ ಒಡಂಬಡಿಕೆಗೆ ಯಾವ ಕಾನೂನು ಸಂಬಂಧಿಸಿದೆಯೆಂದು ವಿಚಾರಿಸುತ್ತೇವೆ: ನೂತನ ಸೃಷ್ಟಿಯು ಯಾವ ಕಾನೂನಿನ ಅಡಿಯಲ್ಲಿದೆ? ಅಪೋಸ್ತಲನು ಇದಕ್ಕೆ ಉತ್ತರಿಸಿ "ನೀವು ಧರ್ಮಶಾಸ್ತ್ರಾಧೀನರಲ್ಲ, ಕೃಪಾಧೀನರಾಗಿದ್ದೀರಿ" (ರೋಮಾ. 6:14) ಎಂದು ಹೇಳುತ್ತಾನೆ. ಏನು! ಇದು ಸಾಧ್ಯವೇ? ಯೇಸುಕ್ರಿಸ್ತನಲ್ಲಿರುವ ನೂತನ ಸೃಷ್ಟಿಗಳಿಗೆ ಯಾವುದೇ

ಕಟ್ಟಳೆಗಳು ಇಲ್ಲವೆ? ದಶಾಜ್ಞೆಗಳಿಗೆ ಅವರು ಬದ್ಧರಲ್ಲವೇ? ಇದಕ್ಕೆ ಉತ್ತರವಾಗಿ ನಾವು ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇವೆ – ಈ ದಶಾಜ್ಞೆಗಳಿಗೆ ಅಬ್ರಹಾಮನಾಗಲೀ, ಇಸಾಕನಾಗಲೀ ಬದ್ಧರಾಗಿದ್ದರೆ? ಇದಕ್ಕೆ ಉತ್ತರವು ಇಲ್ಲ; ಅವು ಅವರಿಗೆ ಕೊಡಲ್ಪಟ್ಟಿರಲಿಲ್ಲ, ಅದುದರಿಂದ ಅವರು ಅವಕ್ಕೆ ಬದ್ಧರಾಗುವುದಿಲ್ಲ ಎಂದಾದರೆ ನೂತನ ಸೃಷ್ಟಿಗಳಿಗೆ ಸಹಾ ಈ ಕಟ್ಟಳೆಗಳು ನೀಡಲ್ಪಟ್ಟಿರುವುದಿಲ್ಲ ಎಂಬುದು ನಮ್ಮ ಉತ್ತರವಾಗಿದೆ. ಕ್ರಿಸ್ತನ ದೇಹವೆಂಬ ಆತ್ಮೀಕ ವರ್ಗದ ಸದಸ್ಯರಾಗಿ ಕ್ರಿಸ್ತಯೇಸುವಿನಲ್ಲಿ ನೂತನ ಸೃಷ್ಟಿಗಳಾಗಿ ಯಾರು ದೇವರ ಸಂಬಂಧಕ್ಕೆ ಬರುತ್ತಾರೋ ಅವರೆಲ್ಲರೂ ದಂಡನೆಯಿಂದಲೂ ಧರ್ಮಶಾಸ್ತ್ರದ ನಿಬಂಧನೆಗಳಿಂದಲೂ ಮುಕ್ತರಾಗಿರುತ್ತಾರೆ.

ದೇವರೆಡೆಗೆ, ಮತ್ತು ಆತನ ಧರ್ಮಶಾಸ್ತ್ರ ಮುಂತಾದವುಗಳೆಡೆಗೆ ನೂತನ ಸೃಷ್ಟಿಯ ಸ್ಥಿತಿಯು ಇತರರಿಗಿಂತ ವಿಭಿನ್ನವೂ ವ್ಯತಿರಿಕ್ತತವೂ ಆಗಿದೆ. ಅವರು ದೇವರೊಡನೆ ನಂಬಿಕೆಯಲ್ಲಿ ನಿಲ್ಲುವ ನೂತನವಾದ ಭರವಸೆಯನ್ನು ಹೊಂದಿದ್ದಾರೆ. ಇದು ನಾವೀಗಾಗಲೆ ಕಂಡುಕೊಂಡಂತೆ ಒಂದು ಸ್ಥಿರವಾದ ನೀತಿನಿರ್ಣಯ ಅಥವಾ ಭರವಸೆಯ ಔಚಿತ್ಯವಾಗಿದೆ. ಈ ಸರಿಯಾದ ಎಣಿಕೆಯು ಅವರಿಗೆ ಕ್ರಿಸ್ತನ ಸಮರ್ಪಣೆಯ ಅರ್ಹತೆಯ ಮೂಲಕ ಮೆರೆದಿದೆ. ಇದು ಅವರ ಹಿಂದಿನ ಎಲ್ಲಾ ಅಸಂಪೂರ್ಣತೆಯನ್ನು ಮರೆಮಾಡುವುದಲ್ಲದೆ ಅವರೊಂದಿಗೆ ಅದು ನೀತಿಯ ವಸ್ತ್ರದೋಪಾದಿಯಲ್ಲಿ ಮುಂದುವರೆಯುತ್ತದೆ. ಆತನ ಅರ್ಹತೆಯ ಮೂಲಕವಾಗಿ ಇಚ್ಛಾಪೂರ್ವಕವಲ್ಲದ ಎಲ್ಲಾ ಮಾತಿನ, ಅಲೋಚನೆಯ ಮತ್ತು ಕ್ರಿಯೆಗಳ ದೋಷವು ಮರೆಯಾಗುತ್ತವೆ. ನೂತನ ಸೃಷ್ಟಿಗಳಾಗಿ ಅವರೆಲ್ಲರೂ ಅಲಂಕಾರಿಕವಾಗಿ ಶ್ವೇತ ನಾರುಮಡಿಯನ್ನು ಧರಿಸುತ್ತಾರೆ – ಇದು ಸಂತರುಗಳ ನೀತಿವಂತಿಕೆ, ಅವರ ಶಿರಸ್ಸೂ ವಿಮೋಚಕನೂ ಆಗಿರುವ ಕ್ರಿಸ್ತನಿಂದ ದೊರೆತದ್ದು. ಈ ನೂತನ ಸೃಷ್ಟಿಗಳು ಪ್ರೀತಿಯ ಉದ್ಯೋಗದ ಮೇರೆಗೆ ಕ್ರಿಸ್ತನ ದೇಹವಾಗಿ ಆತನ ಸಂಬಂಧದಲ್ಲಿ ನಿಲುವು ತಾಳುವ ಅಂಗೀಕಾರ ಹೊಂದಿದ್ದಾರೆ. ಅವರ ಪ್ರತಿಷ್ಠೆಯ ಪ್ರಕಟನೆ ಏನೆಂದರೆ ದೇವಕುಮಾರನ ಮರಣದಲ್ಲಿ ವ್ಯಕ್ತವಾದ ದೇವರ ಕೃಪೆ ಮತ್ತು ಕರುಣೆಗಳನ್ನು ಅದರ ಮೂಲಕ ತಮ್ಮ ನೀತಿನಿರ್ಣಯವನ್ನು ಅವರು ಮೆಚ್ಚುವವರಾಗಿದ್ದಾರೆ ಮತ್ತು ಈ ಎಲ್ಲಾ ಕೃಪಾಶೀರ್ವಾದಗಳನ್ನು ನೀಡುವಾತನನ್ನು ಪ್ರೀತಿಸುತ್ತಾರೆ ಹಾಗೂ ತಮ್ಮ ದೇಹಗಳನ್ನು ಆತನಿಗೆ ಮೆಚ್ಚಿಗೆಯಾದ ಮತ್ತು ಮೀಸಲಾದ ಸಜೀವ ಯಜ್ಞವಾಗಿ ದೈವಿಕ ಆಹ್ವಾನದ ಸಾಮರಸ್ಯಕ್ಕನುಸಾರ ಸಮರ್ಪಿಸಲು ಸಂತೋಷಿಸುತ್ತಾರೆ.

ಈ ಪ್ರತಿಷ್ಠೆಯು ಅಥವಾ ಲೌಕಿಕ ಆಸಕ್ತಿ, ನಿರೀಕ್ಷೆ, ಧ್ಯೇಯ ಮತ್ತು ಆಕಾಂಕ್ಷೆಗಳ ತ್ಯಾಗದ ಅಂಜಿಕೆಯಿಂದಲ್ಲ ಅಥವಾ ಬಹುಮಾನದ ಸ್ವಾರ್ಥಪ್ರೀತಿಯಿಂದಲ್ಲ ಆದರೆ ಶುದ್ಧವಾದ ಪ್ರೀತಿಯಿಂದಲೇ ಅಂದರೆ ದೈವಿಕಪ್ರೀತಿಯನ್ನು ಮೆಚ್ಚಿಕೊಳ್ಳುವುದರಿಂದ ಮತ್ತು ದೇವರೆಡೆಗೆ ತನ್ನಷ್ಟಕ್ಕೇ ವ್ಯಕ್ತಗೊಳ್ಳುವ ಪ್ರತಿಕ್ರಿಯೆಯುಳ್ಳ ಪ್ರೀತಿಯ ಮೂಲಕ ಹಾಗೂ ದೇವರ ಎಲ್ಲಾ ಅದ್ಭುತ ಯೋಜನೆಗಳೊಂದಿಗಿನ ಸಹಕಾರದಿಂದ ಚುರುಕುಗೊಳ್ಳುತ್ತದೆ. ಪ್ರೀತಿ ಮತ್ತು ಭಕ್ತಿಯ ಈ ಅರಿಕೆಯು ಕರ್ತನಿಂದ ಅಂಗೀಕಾರಗೊಂಡು, ಆತನ ಆತ್ಮವು ಪಾಲುತೆಗೆದುಕೊಳ್ಳುತ್ತದೆ. ಇಂಥವರು ಪರಿಶುದ್ಧಾತ್ಮನಿಂದ ಜನಿಸಿದ ದೇವರ ಮಕ್ಕಳೆಂದು ಪರಿಗಣಿಸಲ್ಪಡುವರು. "ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ: ಮುಂದೆ ನಾವು ಏನಾಗುವೆವೋ ಅದು ಇನ್ನೂ ಪ್ರತ್ಯಕ್ಷವಾಗಲಿಲ್ಲ. [ದೇವರು ವಾಗ್ದಾನ ಮಾಡಿರುವ ಪುನರುತ್ಥಾನದಲ್ಲಿ ನೂತನ ದೇಹವನ್ನು ಧರಿಸಿಕೊಳ್ಳುವ ನಾವು ಆಗ ಆಗುವ ಬದಲಾವಣೆಯನ್ನು ಎಷ್ಟರಮಟ್ಟಿಗೆ ಅನುಭವಿಸುವೆವು] ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (ಈ ಆಲೋಚನೆಯು ನಮಗೆಲ್ಲರಿಗೂ ತೃಪ್ತಿಕರವಾಗಿದೆ) 1 ಯೋಹಾನ 3:2.

ಪರಲೋಕದ ತಂದೆಯು ತನ್ನ ಪುತ್ರರಾದ ದೇವದೂತರನ್ನು ಸಿನಾಯಿಯ ಕಟ್ಟಳೆಗೆ ಒಳಪಡಿಸುತ್ತಾನೋ? ಅವರಿಗೆ ಬೇರೆ ದೇವರು ಇರಬಾರದೆಂಬ ಎಚ್ಚರಿಕೆಯನ್ನು ಕೊಡುತ್ತಾನೆಯೋ? ಅವರು ಅವುಗಳ ವಿಗ್ರಹಗಳನ್ನು ಮಾಡಿಕೊಳ್ಳಬಾರದು, ಅವನ್ನು ಪೂಜಿಸಬಾರದು, ಅವರು ಆಶಿಸಬಾರದು, ಕದಿಯಬಾರದು, ಸುಳ್ಳುಸಾಕ್ಷಿ ಹೇಳಬಾರದು ನರಹತ್ಯ ಮಾಡಬಾರದು ಮುಂತಾಗಿ ಹೇಳುತ್ತಾನೆಯೋ? ನಾವು ಉತ್ತರಿಸುವುದೇನೆಂದರೆ "ಇಲ್ಲ". ನಿಶ್ಚಿತವಾಗಿಯೂ ಆತನು ತನ್ನ ದೇವದೂತರಾದ ಮಕ್ಕಳಿಗೆ ಅಂತಹ ಕಟ್ಟಾಜ್ಞೆಗಳನ್ನು ವಿಧಿಸಿಲ್ಲ. ಆದುದರಿಂದ ಇಂಥಾ ನಿಯಮಗಳು ನೂತನ ಸೃಷ್ಟಿಗೆ ನೀಡಲ್ಪಡುವುದೆಂದು ನಾವು ಯಾಕೆ ನಿರೀಕ್ಷಿಸಬೇಕು? ಪರಲೋಕದ ತಂದೆಯು ಈ ನೂತನಸೃಷ್ಟಿಗಳನ್ನು ತನ್ನ ಮಕ್ಕಳಾಗಿ ಅಂಗೀಕರಿಸಿದ್ದಾನಲ್ಲವೋ? ಆತನು ತನ್ನಾತ್ಮನನ್ನು ಅವರಿಗೇ ನೀಡಲಿಲ್ಲವೋ? ಆತನ ಪವಿತ್ರಾತ್ಮನನ್ನು ಹೊಂದಿದವರಿಗೆ ಅವರು ಸ್ವಾಭಾವಿಕವಾಗಿ ತಮ್ಮ ಸ್ವೇಚ್ಛಾನುಸಾರವಾಗಿರಲು ಬಿಡದೆ ಇಂಥಹ ಕಟ್ಟಳೆಗಳನ್ನು ನೀಡುವ ಅವಶ್ಯಕತೆ ಇದೆಯೋ? ನಾವು ಸೇವಕರನ್ನು ಕಟ್ಟಾಜ್ಞೆಗಳ ಅಧೀನಕ್ಕೆ ಒಪ್ಪಿಸುವ ಔಚಿತ್ಯವನ್ನು ಕಾಣುತ್ತೇವೆ. ಯಾಕೆಂದರೆ, ಅವರು ಸರ್ವಸಾಮಾನ್ಯವಾದ ಕಲ್ಯಾಣದಲ್ಲಿ ಮಹತ್ತ್ವವಾದ ಆಸಕ್ತಿಯನ್ನು ಹೊಂದಿರುವುದಿಲ್ಲ. ಅವರಲ್ಲಿ ಬಹುಶಃ ಅವರ ಒಡೆಯನ ಆತ್ಮವಾಗಲೀ, ಮನೋಧರ್ಮವಾಗಲೀ ಪೂರ್ಣ ಪ್ರಮಾಣದಲ್ಲಿ ಇರುವುದಿಲ್ಲ. ಆದರೆ ಆತನ ಆತ್ಮನಿಂದ ಸಮಗ್ರವಾಗಿ ತುಂಬಿಕೊಂಡಿರುವ ಮತ್ತು ಆತನ ಚಿತ್ತವನ್ನು ನೆರವೇರಿಸುವಲ್ಲಿ ಸಂತೋಷಿಸುವ ಮತ್ತು ಆತನ ಎಲ್ಲಾ ಕೃಪಾಪೂರ್ಣ ಯೋಜನೆಗಳಲ್ಲಿ ಜೊತೆಕೆಲಸದವರಾಗಿರಲು ಹರ್ಷಿಸುವ ಸಮರ್ಪಕವಾದ ಒಡೆಯ ಮತ್ತು ಸಮರ್ಪಕವಾದ ಮಕ್ಕಳನ್ನು ಊಹಿಸುವಾಗ ಅಂಥಹ ತಂದೆಯು ತನ್ನ ಮಕ್ಕಳನ್ನು ಕಟ್ಟಳೆಗಳ ಅಧೀನ ಪಡಿಸುವುದರ ಅವಶ್ಯಕತೆ ಇದೆಯೋ?.

ಮೋಶೆಯು ನಿಜವಾಗಿಯೂ ಇಚ್ಛಾಪೂರ್ವಕವಾಗಿ ಆತನ ಎಲ್ಲಾ ಮನೆತನದವರ ಪ್ರಾಮಾಣಿಕ ಸೇವಕನಾಗಿದ್ದ. ಮತ್ತು ಸೇವಕರುಗಳ ಕುಟುಂಬವು ಮೋಶೆಯ ಧರ್ಮಶಾಸ್ತ್ರದಡಿಯಲ್ಲಿ ಒಂದು ಆಸ್ತಿಯಾಗಿದ್ದು ಪಾಪದ ಕಾರಣ ವಾಗ್ದಾನಮಾಡಿದ ಸಂತತಿಯು ಬರುವವರೆಗೆ ಕಾಯಲ್ಪಟ್ಟಿತು. ಯೇಸುವು ತನ್ನ ಮಾನುಷ ದೇಹದ ಸಲುವಾಗಿ ತನ್ನನ್ನು ಪ್ರಸಿದ್ಧಿಗೊಳಿಸದೆ ದಾಸತ್ವಕ್ಕೆ ಒಪ್ಪಿಸಿಕೊಟ್ಟು ಒಬ್ಬ ಸೇವಕನಾದನು. ಧರ್ಮಶಾಸ್ತ್ರದಡಿಯಲ್ಲಿ ಆತನು ಆ ಧರ್ಮಶಾಸ್ತ್ರವು ನ್ಯಾಯಯುತವಾದುದೆಂದು ನಿರೂಪಿಸಿದ್ದಲ್ಲದೆ ತಾನು ಈ

ಲೋಕವನ್ನು ವಿಮೋಚಿಸುವಂತೆ ತನ್ನ ದೇಹದಲ್ಲಿಯೂ ಆತನು ಪರಿಪೂರ್ಣನಾಗಿದ್ದನು. ಆತನು ಮರಣದಿಂದ ಜೀವಿತನಾಗಿ ಎದ್ದು ಬಂದಾಗ ನೂತನ ಸೃಷ್ಟಿಯ ಅನೇಕ ಸಹೋದರರ ಮುಖ್ಯಸ್ಥನಾಗಿ ಹಾಗೆ ಎದ್ದು ಬಂದವರಲ್ಲಿ ಮೊದಲಿಗನಾದನು. ದೇಹಧಾರಿಯಾಗಿ ಆತನು ಧರ್ಮಶಾಸ್ತ್ರಕ್ಕೆ ಅಧೀನನಾಗಿದ್ದನು. ಆದರೆ ಸತ್ತವರೊಳಗಿಂದ ಎದ್ದು ಬಂದ ನೂತನ ಸೃಷ್ಟಿಯಾಗಿ ಆತನು ಆ ಧರ್ಮಶಾಸ್ತ್ರದ ಅಧೀನದಲ್ಲಿರಲಿಲ್ಲ. ಆತನು ದೇವರ ಮಕ್ಕಳ ನೂತನ ಮನೆಯ ಯಜಮಾನನಾಗಿದ್ದನು; "ಕ್ರಿಸ್ತನು ತನ್ನ ಸ್ವಂತ (ಮಕ್ಕಳ)ಮನೆಯ ಮಗನಾಗಿದ್ದಾನೆ ಮತ್ತು ನಾವು ಗಟ್ಟಿಯಾಗಿಹಿಡುಕೊಂಡಿರುವುದಾದರೆ ನಾವೇ ಆ ಮನೆ ಆಗಿದ್ದೇವೆ".ನಾವು ಇನ್ನೂ ಮರ್ತ್ಯದೇಹಧಾರಿಗಳಾಗಿದ್ದಾಗ್ಯೂ, ನೂತನ ಸೃಷ್ಟಿಗಳಾದ ನಾವು ಮಾಂಸ ಶರೀರಿಗಳಲ್ಲ, ಮಾಂಸಧಾರಿಗಳಾಗಿ ನಡೆಸಿಕೊಳ್ಳುವವರಲ್ಲ. ಲೋಕದಲ್ಲಿ ಉಳಿದವರಂತೆ ದೇವರಿಂದ ನಡೆಸಿಕೊಳ್ಳುವವರಲ್ಲ. ಆದರೆ ಸಧ್ಯಕ್ಕೆ ಗುಡಾರವೋ ಎಂಬಂತೆ ಮರ್ತ್ಯದೇಹಿಗಳಾಗಿ ಸ್ವಲ್ಪಕಾಲ ವಾಸಿಸುವ ನಾವು ದತ್ತು ಸ್ವೀಕಾರಕ್ಕಾಗಿ, ಬುದ್ದಿಯುಳ್ಳವರಾಗಿ, ನಮ್ಮ ಸಮಗ್ರದೇಹದ ವಿಮೋಚನೆಗಾಗಿ, ಈಗಾಗಲೇ ಮಹಿಮ ಹೊಂದಿದ ನಮ್ಮ ಯಾಜಮಾನನಂತಾಗಲು ಕಾಯುತ್ತಿರುತ್ತೇವೆ –"ನೀವಾದರೋ ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವುದಾದರೆ ಶರೀರಾಭಾವಾಧೀನರಲ್ಲ. ದೇವರಾತ್ಮನಿಗೆ ಅಧೀನರಾಗಿದ್ದೀರಿ" (ರೋಮಾ.8:9)ಹೀಗಾಗಿ ಕ್ರಿಸ್ತನು ನಿಮ್ಮೊಳಗೆ ವಾಸಮಾಡುತ್ತಾನೆ.

ದೈವಿಕ ದೃಷ್ಟಿಕೋನವನ್ನು ಹರಿಸದ ಹೊರತು ಯಾರೂ ಈ ಪ್ರಸ್ತಾಪವನ್ನು ಗ್ರಹಿಸಲಾರರು. ದೇವರಾತ್ಮನಿಂದ ಜನಿಸಿದ ಈ ಎಲ್ಲಾ ನೂತನ ಸೃಷ್ಟಿಗಳು ಒಬ್ಬನೇ ದೇವರಲ್ಲದೆ ಬೇರೆ ದೇವರುಗಳನ್ನು ಅಲೋಚಿಸಲಾರರು. ಅವರು ಬೇರೆ ದೇವರುಗಳ ಮೂರ್ತಿಯನ್ನು ಮಾಡಿಕೊಳ್ಳುವುದಾಗಲೀ ಅವುಗಳನ್ನು ಪೂಜಿಸುವುದಾಗಲೀ ಮಾಡುವುದಿಲ್ಲ. ಅವರು ದೇವರ ಹೆಸರನ್ನು ಅಯೋಗ್ಯವಾಗಿ ಬಳಸುವ ಬಗ್ಗೆಯೂ ಯೋಚಿಸಲಾರರು. ಅವರು ಇತರರ ವಸ್ತುಗಳನ್ನು ಕದಿಯುವುದಾಗಲೀ ಮಾಡದೆ ಬದಲಾಗಿ ಅವರಿಗೆ ನೀಡಬಯಸುವರು. ಅವರು ಬೇರೆಯವರ ವಿರುದ್ದ ಸುಳ್ಳು ಸಾಕ್ಷಿ ಹೇಳುವ ಬಗ್ಗೆ ಅಲೋಚಿಸದೆ ಅವರಲ್ಲಿರುವ ಪ್ರೀತಿಯು ಇತರ ಸಹೋದರರ ಅಪರಾಧಗಳನ್ನು ಮಾತ್ರವಲ್ಲ ಸಮಸ್ತ ಲೋಕದ ಅಪರಾಧಗಳನ್ನೇ ಮುಚ್ಚಿ ಹಾಕುವುದು. ಅವರು ತಮ್ಮ ಸಹಜೀವಿಗಳನ್ನು ಕೊಲ್ಲಲಾರರು. ಬದಲಾಗಿ ಅವರಿಗಾಗಿ ತಮ್ಮ ಪ್ರಾಣವನ್ನೇ ಕೊಡಲು ಹೆಚ್ಚು ಹೆಚ್ಚಾಗಿ ಸಿದ್ಧರಾಗುವರು – ಹೌದು ಅವರಲ್ಲಿರುವ ಪರಿಶುದ್ಧಾತ್ಮವು ಅವರನ್ನು ತಮ್ಮ ಸಹೋದರರಿಗಾಗಿ ಪ್ರಾಣವನ್ನೇ ನೀಡಲು ಪ್ರೇರೇಪಿಸುತ್ತದೆ. ಅದೇ ಪರಿಶುದ್ದಾತ್ಮವು ಅವರ ನಾಯಕನನ್ನು ಎಲ್ಲರಿಗಾಗಿ ಈಡುಬಲಿಯಾಗಲು ಪ್ರೇರೇಪಿಸಿತ್ತು. ದೇವರು ಸೇವಕರ ಮನೆಯವರಿಗೆ ಕೊಟ್ಟಂತೆ ತನ್ನ ಮಕ್ಕಳ ಮನೆಯವರಿಗೂ ಕಟ್ಟಳೆಗಳನ್ನು ನೀಡುವುದಾದರೆ ಅದು ಸರಿಹೊಂದಲಾರದೆಂದು, ಪೂರ್ಣವಾಗಿ ಯುಕ್ತವಾದುದಲ್ಲವೆಂದು ನಮಗೆ ಕಾಣುವುದಿಲ್ಲವೆ? ಪವಿತ್ರಾತ್ಮನನ್ನು ಕಳಕೊಳ್ಳದೆ, ನೂತನ ಸೃಷ್ಟಿಗಳು ಎಂಬುದು ಸ್ಥಗಿತಗೊಳ್ಳದೆ ದೇವರಮಕ್ಕಳ ಮನೆಯ ಸದಸ್ಯರು ಅಂಥಹ ಕಟ್ಟಳೆಗಳಿಗೆ ಒಳಪಡಲು ಸಾಧ್ಯವಿಲ್ಲ."ಯಾವನಿಗಾದರೂ ಕ್ರಿಸ್ತನ ಆತ್ಮನು (ಮನಸ್ಸು, ಪ್ರವೃತ್ತಿ) ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ" (ರೋಮಾ. 8:8,9).

ಆದರೆ, ಈ ನೂತನ ಸೃಷ್ಟಿಗಳಿಗೆ ಯಾವ ಕಾನೂನುಗಳೂ, ನೀತಿ ನಿಯಮಗಳೂ ಇಲ್ಲದಿರುವುದಾದರೂ ಹೇಗೆ? ಇದಕ್ಕೆ ಉತ್ತರಿಸುತ್ತಾ ನಾವು ಹೇಳುವುದೇನೆಂದರೆ, ದೈವಿಕ ನಿಯಮಗಳ ಅತ್ಯಂತ ಶ್ರೇಷ್ಟವಾದ ಹೇಳಿಕೆಯೆಂದರೆ "ಪ್ರೀತಿ'. ದೇವರ ನಿಮಯಗಳು ಎಷ್ಟೋ ವ್ಯಾಪಕವಾಗಿವೆ, ಎಷ್ಟೋ ಶೋಧಕವಾಗಿವೆ, ಕೀಲು ಮಜ್ಜೆಗಳನ್ನು ವಿಭಜಿಸುವಂತಾದ್ದಾಗಿವೆ. ಪ್ರೀತಿಯ ಹೊರತಾಗಿ ಅವನ್ನು ಸಂಪೂರ್ಣವಾದ ಅರ್ಥದಲ್ಲಿ ಪೂರೈಸಲು ಸಾಧ್ಯವೇ ಇಲ್ಲ. ನಾವು ಧರ್ಮಶಾಸ್ತ್ರದ ಪ್ರತಿಯೊಂದು ಸಂಗತಿಗಳನ್ನೂ ಕಟ್ಟುನಿಟ್ಟಾಗಿ ಪಾಲಿಸಿದರೂ ದೇವರ ಬಗ್ಗೆ ಪ್ರೀತಿಯೆಂಬ ಶ್ರದ್ಧೆ ಇಲ್ಲದೇ ಹೋದಲ್ಲಿ ದೇವರ ನಿಯಮಗಳನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಪ್ರೀತಿಸುವುದೆಂದರೆ ದೇವರ ನಿಯಮಗಳನ್ನು ಪಾಲಿಸುವುದು, ಎಲ್ಲಿ ಪ್ರೀತಿ ತನ್ನ ರಾಜ್ಯಭಾರ ಮಾಡುವುದೋ ಅಲ್ಲಿ ದೇವರ ವ್ಯವಸ್ಥೆಯ ಪ್ರತಿಯೊಂದು ಸಂಗತಿಯೂ, ಲಕ್ಷಣವೂ ಹೃತ್ಪೂರ್ವಕವಾದ ವಿಧೇಯತೆಯ ನಂತರವೇ ಜೀವಿಯ ಅತ್ಯುತ್ತಮ ಸಾಮರ್ಥ್ಯಕ್ಕನುಸಾರವಾಗಿ ಹೊಂದಿಕೊಳ್ಳಲಾಗುವುದೇ ಹೊರತು ಒತ್ತಾಯಪೂರ್ವಕವಾಗಿ ಅಲ್ಲ, ಆದರೆ ಸಂತೋಷಪೂರ್ವಕವಾಗಿ, ಪ್ರೀತಿಪೂರ್ವಕವಾಗಿ ಹೊಂದಿಕೊಳ್ಳುವದು.

ಅಂತಹ ದೇವರ ಮತ್ತು ಆತನ ನೀತಿವಂತಿಕೆಯ ಬಗೆಗಿನ ಪ್ರೀತಿಯನ್ನು ನೂತನ ಸೃಷ್ಟಿಯು ತನ್ನ ಪ್ರತಿಷ್ಠೆಯಲ್ಲಿ ಪ್ರಕಟಿಸುತ್ತದೆ. ಅಲ್ಲಿ ಪ್ರೀತಿಯೇ ನಿಯಮವಾಗುತ್ತದೆ. ಅದು ಪ್ರೀತಿಯೆಂಬ ನಿಯಮದಿಂದ ಮರಣ ಪರ್ಯಂತದವರೆಗೂ ಭದ್ರವಾಗಿ ಕಟ್ಟಲ್ಪಡುತ್ತದೆ. ಆ ನಿಯಮವನ್ನು ಪಾಲಿಸುವುದರಲ್ಲಿ ವಿಫಲವಾದರೆ ಒಡಂಬಡಿಕೆ ಸಂಬಂಧದಲ್ಲಿ ಅದೊಂದು ಉಲ್ಲಂಘನೆ ಎನಿಸುತ್ತದೆ. ಪ್ರೀತಿಯ ನಿಯಮಕ್ಕೆ ಜ್ಞಾನ ಮತ್ತು ಸಾಮರ್ಥ್ಯಕ್ಕನುಸಾರವಾಗಿ ವಿಧೇಯರಾಗಿರುವುದೆಂದರೆ ಅದು ಸ್ವಾರ್ಥತ್ಯಾಗ ಎನಿಸುತ್ತದೆ. ಇದು ಈ ಲೋಕದ ಸ್ಪೂರ್ತಿ ಶಾರೀರಿಕ ಬಲಹೀನತೆಗಳ ಮೇಲೆ ಮತ್ತು ಆಪಾದಕ ದೂತನ ಮೇಲೆ ಜಯಸಾಧಿಸುತ್ತದೆ. ಅದು ಉದ್ದೇಶಪೂರ್ವಕವಲ್ಲದ ಅಪರಾಧಗಳಿಗೆ ದೇವರ ಕೃಪಾಪರಿಹಾರ ಮತ್ತು ಅತನ ಹೆಸರಿನಲ್ಲಿ ವಿಜಯಿಗಳನ್ನು ಆತನ ಹೆಸರು ಮತ್ತು ಅರ್ಹತೆಗಳ ಮೂಲಕ ಮೇಲೆತ್ತುವುದು. ಮತ್ತೊಂದೆಡೆಯಲ್ಲಿ ಉದ್ದೇಶಪೂರ್ವಕವಾದ ಅವಿಧೇಯತೆ, ಮತ್ತು ಇಚ್ಛಾಪೂರ್ವಕವಾಗಿ ಹಠಮಾರಿತನದಿಂದ ಪ್ರೀತಿಯ ನಿಯಮವನ್ನು ಉಲ್ಲಂಘಿಸುವುದು ದತ್ತುಸ್ವೀಕಾರದ ಭಾವವನ್ನು ತೊಡೆದುಹಾಕುವುದು –ಅಂದರೆ ಪವಿತ್ರಾತ್ಮನನ್ನು ನಂದಿಸುವುದು ಅರ್ಥಾತ್ ನೂತನ ಸೃಷ್ಟಿಯು ಮರಣ ಹಾಗೂ ಏನೂ ಇಲ್ಲದಂತಾಗುವುದು.

ಅಪೋಸ್ತಲನು ನಮ್ಮ ಎಲ್ಲಾ ಅಪರಿಪೂರ್ಣತೆಗಳಲ್ಲಿ ಕೃಪೆಯು ಯಾವ ರೀತಿಯಲ್ಲಿ ಪರಿಹಾರ ನೀಡುತ್ತದೆ ಎಂಬುದನ್ನು ತೆಗೆದುಕೊಂಡು ಒಂದು ಬದಲಾಗಿ ಇರಿಸಿದ ಪ್ರಶ್ನೆಯನ್ನು ಕೇಳುತ್ತಾನೆ ಮತ್ತು ಅದಕ್ಕೆ ಉತ್ತರಿಸುತ್ತಾನೆ" ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ? (ರೋಮಾ. 6:1–2). ಕ್ರಿಸ್ತನಲ್ಲಿ ನಮ್ಮ ಕ್ಷಮಾಪಣೆಯನ್ನು

ಒಪ್ಪಿಕೊಳ್ಳುವಾಗ ನಾವು ನಮ್ಮ ಪಾಪಗಳಿಗಾಗಿ ಬೇಸತ್ತಿದ್ದೇವೆಂದು ಪ್ರಕಟಿಸುತ್ತೇವೆ. ನಮ್ಮ ಇಚ್ಚೆಗಳು ಪಾಪದ ಪಾಲಿಗೆ ಸತ್ತಿವೆ ಮತ್ತು ನಾವು ನೀತಿಯುಳ್ಳ ಹೊಸಜೀವಿತವನ್ನು ಪ್ರಾರಂಭಿಸಿದ್ದೇವೆ. ನೂತನ ಸೃಷ್ಟಿಗಳಾಗಿ ದೇವರೊಂದಿಗೆ ಮತ್ತು ನೀತಿಯೊಂದಿಗೆ ನಮ್ಮ ಜೀವಂತಿಕೆಯನ್ನು ನೋಡುವಾಗ ನಾವು ಪಾಪದ ಪಾಲಿಗೆ ಸತ್ತವರು ಎಂಬ ಗ್ರಹಿಕೆಯುಂಟಾಗುತ್ತದೆ. ಆದುದರಿಂದ ನಾವು ಎಂದಾದರೂ ಪಾಪದ ಪಾಲಿಗೆ ಜೀವಿಸುವವರಾದರೆ ನಮ್ಮ ಚಿತ್ತ, ನಮ್ಮ ಮನಸ್ಸು, ನಮ್ಮ ಪ್ರೀತಿ ಇವುಗಳೆಲ್ಲವೂ ಪಾಪ ಮತ್ತು ಅನೀತಿವಂತಿಕೆ ಗಳಾಗುತ್ತವೆ. ಇದು ಖಂಡಿತವಾಗಿಯೂ ನಾವು ನೂತನ ಸೃಷ್ಟಿಯಾಗಿ ಸತ್ತಿದ್ದೇವೆಂದು ತೋರಿಸುತ್ತದೆ. ನಾವು ಇನ್ನೆಂದಿಗೂ ದೇವರಿಂದ ಯೇಸುಕ್ರಿಸ್ತನಲ್ಲಿ ನೂತನ ಸೃಷ್ಟಿಗಳೆಂದು ಎಣಿಕೆಯಾಗುವುದಿಲ್ಲ. ಆತನ ಮೂಲಕವೇ ಹಳೆಯ ಸಂಗತಿಗಳು ಅಳಿದುಹೋಗಿದ್ದವು ಮತ್ತು ಕನಿಷ್ಟವಾಗಿ ನಮ್ಮ ಎಲ್ಲಾ ಇಚ್ಚೆಗಳು ಆತನಲ್ಲಿ ನೂತನವಾಗಿತ್ತು .

ನಾವಿಲ್ಲಿ ಸ್ವಲ್ಪ ತಡೆಹಿಡಿದು ಅಂತಹ ಕೇವಲ ದೈಹಿಕ ಮುಗ್ಗರಿಸುವಿಕೆ ಮತ್ತು ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಟತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದ ಮೇಲೆ ಇಚ್ಛಾಪೂರ್ವಕವಾಗಿ ಕೃಪೆಯಿಂದ ಪತನಹೊಂದುವುದರ ನಡುವಣ ಇರುವ ವ್ಯತ್ಯಾಸವನ್ನು ಗಮನಿಸೋಣ. ಈ ಪತನದಿಂದ ನಾವು ಮೇಲೇಳುವುದು ಅಸಾಧ್ಯ (ಇಬ್ರಿಯ 6:4-6 ಮತ್ತು 10:26 ಇವುಗಳನ್ನು ನೋಡಿರಿ). ನಾವು ಇವುಗಳಲ್ಲಿನ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಕಂಡುಕೊಳ್ಳಬೇಕು. ಯಾಕೆಂದರೆ ಅವುಗಳು ಸಂಪೂರ್ಣವಾಗಿ ಭಿನ್ನವಾಗಿವೆ. ದೈಹಿಕವಾಗಿ ಮುಗ್ಗರಿಸುವುದೆಂದರೆ ನಮ್ಮ ಮರ್ತ್ಯ ಶರೀರವು ವಿರೋಧಿಯ ಆಕ್ರಮಣದಿಂದಾಗಿ ವಂಶಪಾರ್ಯಂ ಪರ್ಯವಾದ ಬಲಹೀನತೆಗಳ ತಪ್ಪುಗಳಿಗೆ ಒಳಗಾಗುವುದು.ಆದರೆ ಅದಕ್ಕೆ ನಮ್ಮ ಮನಸ್ಸಾಗಲೀ, ಇಚ್ಚೆಯಾಗಲೀ ಒಪ್ಪಿಕೊಳ್ಳುವುದಿಲ್ಲ. ಅದು ದೇಹದೊಂದಿಗೆ ಸಂಪೂರ್ಣವಾಗಿ ಅನುಮತಿಸುವುದಿಲ್ಲ. ನಿಜವಾಗಿ, ಅಂತಹ ಮುಗ್ಗರಿಸುವಿಕೆಗಾಗಿ ದುಃಖಿಸಬೇಕು, ಅದರ ವಿರುದ್ಧ ಹೋರಾಡಬೇಕು. ಆದರೂ ದೇವರ ಕೃಪೆಯಿಂದ ಅವುಗಳು ನಮ್ಮ ಗುಣನಡತೆಯನ್ನು ಉತ್ತಮಪಡಿಸಿಕೊಳ್ಳುವಲ್ಲಿ ಸಹಾಯಮಾಡುತ್ತವೆ. ಆರೀತಿ ನಾವು ನಮ್ಮನ್ನು ನಂಬದಿರಲು, ನಮ್ಮ ಸ್ವಂತ ಶಕ್ತಿಯ ಬಗ್ಗೆ ಕೊಚ್ಚಿಕೊಳ್ಳದಿರಲು, ಆದರೆ ಈ ಲೋಕವನ್ನು ಜಯಿಸುವ ಶಕ್ತಿಯು ನಂಬಿಕೆಯ ಮೂಲಕ ಲಭಿಸುತ್ತದೆ ಎಂದು ಗ್ರಹಿಸಲು ಕಲಿಯುತ್ತೇವೆ. ಆದುದರಿಂದ ದುಃಖದಲ್ಲಿರುವಾಗ ನೂತನ ಸೃಷ್ಟಿಯು ತನ್ನ ದೇಹವು ಕೆಲಮಟ್ಟಿಗೆ ಮುಗ್ಗರಿಸಿತೆಂದು ಕಂಡುಕೊಳ್ಳುತ್ತಾನೆ. ಹೀಗೆ ಕಂಡು ಬಂದ ತನ್ನ ಬಲಹೀನತೆಯಿಂದ ತನ್ನನ್ನು ಬಲಪಡಿಸಿಕೊಳ್ಳಬೇಕು ಮತ್ತು ಕರ್ತನಲ್ಲಿ, ಆತನ ಶಕ್ತಿಯ ಸಾಮರ್ಥ್ಯದಲ್ಲಿ ಬಲಹೊಂದಿಕೊಳ್ಳಬೇಕು ಮತ್ತು ಅದೇ ಅಕ್ರಮಣಕ್ಕೆ ಮತ್ತೆ ತುತ್ತಾಗಬಾರದು.

ಈ ರೀತಿಯಲ್ಲಿ ನೂತನ ಸೃಷ್ಟಿಗಳಾದ ನಾವು ದೈಹಿಕ ಸಂಗತಿಗಳಾಗಿ ಮೇಲೆ ನಮ್ಮ ಭರವಸೆಯನ್ನು ಇಡಬಾರದೆಂದು ನಮ್ಮ ಎಲ್ಲಾ ಅಗತ್ಯದ ಸಮಯದಲ್ಲಿ ದೇವರೆಡೆಗೆ ನೋಡುವುದಾದಲ್ಲಿ ನಮ್ಮ ಸಹಾಯವು ಬರುತ್ತದೆಂದು ಹಂತ ಹಂತವಾಗಿ ಕಲಿತುಕೊಳ್ಳುತ್ತೇವೆ. ನಾವು ಇನ್ನೂ ನೂತನ ಸೃಷ್ಟಿಗಳು ಮತ್ತು ನಾವು ಇನ್ನೂ ನಂಬಿಕೆಯ ಮೂಲಕ ಯೇಸುವಿನ ತ್ಯಾಗದ ಅರ್ಹತೆಗೆ ಒಳಪಟ್ಟಿದ್ದೇವೆ ಮತ್ತು ಪ್ರೀತಿಯ ನಿಬಂಧನೆಯನ್ನು ಪಾಲಿಸುವುದಕ್ಕೆ ಹೆಣಗುತ್ತಿದ್ದೇವೆ ಎಂಬುದನ್ನು ಸದಾ ನೆನಪಿಸಿಕೊಳ್ಳಬೇಕು. ಕರ್ತನು ತಾನೇ ಹೇಳಿದಂತೆ "ತಂದೆಯು ತಾನೇ ನಿಮ್ಮ ಮೇಲೆ ಮಮತೆಯಿಡುತ್ತಾನಲ್ಲವೇ". ನಾವು ಒಳ್ಳೆಯ ಧೈರ್ಯವುಳ್ಳವರಾಗಿರಬೇಕು ಮತ್ತು ನೂತನ ಸೃಷ್ಟಿಗಳು ಪಾಪವಮಾಡುವುದಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು- ಪಾಪವನ್ನು ನೂತನ ಸೃಷ್ಟಿಯ ಮೇಲೆ ಆಪಾದಿಸಲಾಗುವುದಿಲ್ಲ, ನಾವು ಪಾಪದ ವಿರುದ್ಧವಾಗಿ ಹೆಣಗಾಡುತ್ತಿರುವವರೆಗೂ ದೇವರಾದುಕೊಂಡವರ ಮೇಲೆ ಯಾರೂ ಏನನ್ನೂ ಆಪಾದಿಸಲಾರರು. ಯಾಕೆಂದರೆ "ದೇವರು ಆದುಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು. ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ." (ರೋಮಾ. 8:33,34).

## ಪರಿಪೂರ್ಣವಾದ ಕಾನೂನಿನ ಮೆಚ್ಚಿಗೆಯಲ್ಲಿ ಬೆಳವಣಿಗೆ

## Growth in Appreciation of the Perfect Law

ಕರ್ತನೊಡನೆ ನಮ್ಮ ಒಡಂಬಡಿಕೆಗೆ ಪ್ರೀತಿಯ ನಿಯಮವೇ ಅಸ್ಥಿವಾರವಾಗಿದ್ದು ಇದರಡಿಯಲ್ಲಿ ನಾವು ನೂತನ ಸೃಷ್ಟಿಗಳಾಗಿದ್ದಾಗ್ಯೂ ನಾವು ಸಂಪೂರ್ಣವಾಗಿ ಆ ನಿಯಮವನ್ನು ಗ್ರಹಿಸಿಕೊಂಡಿಲ್ಲ. ನಾವಿನ್ನೂ ಕ್ರಿಸ್ತನ ಪಾಠಶಾಲೆಯಲ್ಲಿದ್ದು ನಿಜವಾದ ಅರ್ಥವನ್ನು ಸಂಪೂರ್ಣವಾಗಿ, ಸಮಗ್ರವಾಗಿ ಕಲಿತುಕೊಂಡು ಕೃಪೆಯಲ್ಲಿಯೂ, ಜ್ಞಾನದಲ್ಲಿಯೂ ಅಭಿವೃದ್ಧಿ ಹೊಂದುತ್ತಾ ನಮ್ಮ ನಂಬಿಕೆಗೆ ಪ್ರೀತಿಯ ವಿವಿಧ ಅಂಶಗಳನ್ನು ಅಂದರೆ ವಿನಯ, ತಾಳ್ಮೆ, ಸಹೋದರ ಕರುಣೆ ಮುಂತಾದವು ಗಳನ್ನು ಕೂಡಿಸಿಕೊಳ್ಳುತ್ತಿದ್ದೇವೆ. ಪ್ರೀತಿಯ ದಾರಿಯಲ್ಲಿ ನಮ್ಮನ್ನು ಪರೀಕ್ಷಿಸಲಾಗುತ್ತದೆ ಮತ್ತು ವಿಶೇಷವಾಗಿ ಇದೇ ವಿಷಯದ ಬಗ್ಗೆ ಪರೀಕ್ಷೆಯಲ್ಲಿ ಪದವಿ ಪ್ರಾಪ್ತಿ ಪಡಕೊಳ್ಳಬೇಕಾಗುತ್ತದೆ. ಯಾರು ಪರಿಪೂರ್ಣವಾದ ಪ್ರೀತಿಯನ್ನು, ಸ್ವಾರ್ಥತ್ಯಾಗದ ಪ್ರೀತಿಯನ್ನು ಪಡಕೊಳ್ಳುತ್ತಾರೋ ಅವರು ಮಾತ್ರವೇ ನೂತನ ಸೃಷ್ಟಿಗಳಾಗಲು ಅರ್ಹರಾಗಿದ್ದು ಕ್ರಿಸ್ತನ ದೇಹದ ಅಂಗಗಳೆಂದು ಎಣಿಸಲ್ಪಡುತ್ತಾರೆ.

## ಗುರಿಗಾಗಿ ಓಡುವುದು ಮತ್ತು ಅದರಲ್ಲಿ ದೃಢವಾಗಿ ನಿಲ್ಲುವುದು

## Running for the Mark, and Standing Fast Thereat

ಅಪೋಸ್ತಲನು ತನ್ನ ಮತ್ತೊಂದು ಉದಾಹರಣೆಯಲ್ಲಿ ನಮ್ಮ ಪ್ರಸ್ತುತ ಅನುಭವವನ್ನು ಒಂದು ಓಟದ ಮೈದಾನಕ್ಕೆ ಹೋಲಿಸುತ್ತಾನೆ. ನಾವು ನಮ್ಮ ಎಲ್ಲಾ ಭಾರವನ್ನೂ, ಸುತ್ತಿಕೊಂಡಿರುವ ಎಲ್ಲಾ ಪಾಪಗಳನ್ನು, ದೈಹಿಕ

ಬಲಹೀನತೆಗಳನ್ನು ಎಲ್ಲಾ ಲೌಕಿಕ ಆಕಾಂಕ್ಷೆಗಳನ್ನು ಬದಿಗಿಟ್ಟು ನಮಗಾಗಿ ಸುವಾರ್ತೆಯಲ್ಲಿ ಸಿದ್ಧಪಡಿಸುವ ಓಟವನ್ನು ಶಾಂತರೀತಿಯಲ್ಲಿ ಓಡುವಂತೆ ನಮಗೆ ಬೋಧಿಸುತ್ತಾನೆ. ಈ ರೀತಿಯಲ್ಲಿ ನಾವು ನಮ್ಮ ಬಹುಮಾನದ ಗುರಿಯನ್ನು ತಲುಪಬಹುದು. ಎಲ್ಲವನ್ನೂ ಮಾಡಿ ಮುಗಿಸಿದ ಮೇಲೆ ನಾವು ಕ್ರಿಸ್ತನಲ್ಲಿ ಪೂರ್ಣಗೊಳ್ಳುವ ಆ ಗುರಿಯಲ್ಲಿ ಸ್ಥಿರವಾಗಿ ನಿಲ್ಲಬಹುದು. (ಫಿಲಿ. 3:14, ಇಬ್ರಿಯ 12:2, ಎಫೆಸ 6:13) ಇದು ನಮಗೆ ಓಟದ ಮೈದಾನದ ಆಲೋಚನೆಯನ್ನು ನೀಡುತ್ತದೆ. ಅದರ ಮೊದಲನೆಯ, ಎರಡನೆಯ, ಮೂರನೆಯ ಕಾಲುಭಾಗದ ಗುರಿಗಳ ಹಾದಿಯಲ್ಲಿ ಎದುರಾಗುವ ಆವರಿಸಿಕೊಳ್ಳುವಿಕೆ, ಕಷ್ಟಗಳು, ವಿರೋಧಗಳು, ಅಮಿಷಗಳು ಮತ್ತು ನಾವೇ ಈ ಓಟವನ್ನು ಆರಂಬಿಸುವುದು. ನಾವು ಆ ಗುರಿಯನ್ನು ತಲುಪದ ಹೊರತು ನಾವು ದೇವರ ಪ್ರೀತಿಯ ಮಗನ ಪ್ರತಿರೂಪವಾಗಲಾರೆವು. ಹಾಗಾದಲ್ಲಿ ನಾವು ಆಳವಾದ ಅರ್ಥದಲ್ಲಿ ದೇವರನ್ನು ಸಂಪ್ರೀತಿಗೊಳಿಸಲಾರೆವು ಮತ್ತು ದೇವರ ರಾಜ್ಯದಲ್ಲಿ ಕ್ರಿಸ್ತನ ಜೊತೆ ವಾರಸುದಾರರಾಗಲಾರೆವು ಎಂದು ತಿಳಿದು ಸಮರ್ಪಕವಾದ ಪ್ರೀತಿಯ ಗುರಿಯನ್ನು ಮುಟ್ಟುವ ಆಕಾಂಕ್ಷೆ ಹೊಂದಿರಬೇಕು. ಇಡೀ ಓಟದ ಮೈದಾನವೇ ದ್ವಾರದಿಂದ ಅಂತ್ಯದವರೆಗೆ ಪ್ರೀತಿಯೇ ಆಗಿದೆ. ನಾವು ದ್ವಾರವನ್ನು ಪ್ರವೇಶಿಸುವುದಾದರೆ ಅದು ಕೃತಜ್ಞತಾ ಪೂರ್ವಕವಾಗಿ ದೇವರೆಡೆಗೆ ನಮ್ಮ ಪಾಪಗಳನ್ನು ಕ್ಷಮಿಸಲು ಕ್ರಿಸ್ತನಲ್ಲಿರುವ ಆತನ ಕೃಪೆಗಾಗಿ. ಈ ರೀತಿಯ ಕರ್ತವ್ಯ ಬದ್ಧವಾದ ಪ್ರೀತಿ ಪ್ರಾರಂಭದಲ್ಲಿಯೇ ನಮ್ಮ ದೇಹವನ್ನು ಸಜೀವ ಯಜ್ಞವನ್ನಾಗಿ ಸಮರ್ಪಿಸಲು ನಮ್ಮನ್ನು ನಡೆಸುತ್ತದೆ. ದೇವರು ನಮಗೆ ಇಷ್ಟೆಲ್ಲಾ ಮಾಡಿರುವಾಗ ನಾವು ನಮ್ಮ ಮೆಚ್ಚುಗೆಯನ್ನು ತೋರಿಸಲೇ ಬೇಕೆಂದು ನಾವು ನಮ್ಮಷ್ಟಕ್ಕೇ ಹೇಳಿಕೊಳ್ಳಬೇಕು. ಕ್ರಿಸ್ತನು ನಮಗೋಸ್ಕರವಾಗಿ ತನ್ನ ಪ್ರಾಣವನ್ನೇ ತೆತ್ತಿದ್ದಾನೆ. ನಾವು ಸಹಾ ನಮ್ಮ ಸಹೋದರರಿಗಾಗಿ ನಮ್ಮ ಪ್ರಾಣವನ್ನೇ ಅರ್ಪಿಸಲು ಬದ್ಧರಾಗಿರಬೇಕು.

ಈ ಬದ್ಧತೆ ಅಥವಾ ಕರ್ತವ್ಯ ಪ್ರೀತಿ ಎಂಬುದು ಬಹಳಷ್ಟು ಸರಿಯಾದುದು, ವಿವೇಚನೆ ಉಳ್ಳದ್ದು. ಆದರೆ ಅಷ್ಟೇ ಸಾಲದು. ಇದು ಕ್ರಮೇಣವಾಗಿ ನಮ್ಮನ್ನು ಇನ್ನೂ ಶ್ರೇಷ್ಠಮಟ್ಟದ ಪ್ರೀತಿಗೆ ನಡೆಸುವಂತಾಗಬೇಕು. ನಾವು ಮೊದಲನೆಯ ಕಾಲು ಭಾಗದ ಗುರಿಯವರೆಗೆ ಓಡುವಾಗ ನಮಗೆ ಇನ್ನೂ ಕರ್ತವ್ಯ ಪ್ರೀತಿ ಇರುತ್ತದೆ. ಇದರ ನಂತರ ನಾವು ಮೆಚ್ಚಿಗೆಯ ಪ್ರೀತಿಯನ್ನು ಪಡೆದಿರುತ್ತೇವೆ. ನಾವು ದೇವರ ಪ್ರೀತಿಯನ್ನು ಮೆಚ್ಚುವುದನ್ನು – ಅದರಲ್ಲಿ ಯಾವರೀತಿಯಲ್ಲಿಯೂ ಸ್ವಾರ್ಥ ಎಂಬ ಪದವಿಲ್ಲ ಆದರೆ ಆತನ ಅದ್ಭುತ ಮತ್ತು ಅಮೋಘವಾದ ಗುಣಲಕ್ಷಣಗಳ ಕಾರ್ಯವಿದೆ ಎಂದು ಅರಿತುಕೊಳ್ಳುತ್ತೇವೆ. ನಾವು ಸ್ವಲ್ಪವಾಗಿ ದೇವರ ನ್ಯಾಯತೀರ್ಪು, ದೈವಿಕ ಜ್ಞಾನ, ದೈವಿಕ ಶಕ್ತಿ, ದೈವಿಕ ಪ್ರೀತಿ ಇವುಗಳನ್ನು ಮೆಚ್ಚಿಕೊಳ್ಳಲು ಬರುತ್ತೇವೆ. ನಾವು ನಮ್ಮ ಸೃಷ್ಟಿಕರ್ತನ ಈ ಗುಣಲಕ್ಷಣಗಳನ್ನು ಗಮನಿಸುವಾಗ ನಾವು ಆತನನ್ನು ಪ್ರೀತಿಸಲು ತೊಡಗುತ್ತೇವೆ. ಅಲ್ಲಿಂದ ನಾವು ನೀತಿವಂತಿಕೆಯನ್ನು ಅಭ್ಯಾಸ ಮಾಡುತ್ತೇವೆ, ಅದು ಕೇವಲ ನಮ್ಮ ಕರ್ತವ್ಯವೆಂಬಂತೆ ಅಲ್ಲ ಆದರೆ ನಾವು ನೀತಿವಂತಿಕೆಯನ್ನು ಪ್ರೀತಿಸುವುದರಿಂದಲೇ.

ಓಟದ ಮೈದಾನದಲ್ಲಿ ಇನ್ನೂ ಉತ್ಸಾಹದಿಂದ ಮುಂದುವರೆಯುವಾಗ, ನಾವು ಎರಡನೆಯ ಕಾಲು ಭಾಗದ ಗುರಿಯನ್ನು ಕ್ರಮಿಸುತ್ತೇವೆ. ಇಷ್ಟರೊಳಗೆ ನಾವು ನೀತಿವಂತಿಕೆಯನ್ನು ಪ್ರೀತಿಸಲು ಕಲಿತದ್ದು ಮಾತ್ರವಲ್ಲ ಅದೇ ಪ್ರಮಾಣದಲ್ಲಿ ಪಾಪವನ್ನು ದ್ವೇಷಿಸಲು ಸಹಾ ಕಲಿಯುತ್ತಿದ್ದೇವೆ ಎಂದು ಕಂಡುಕೊಳ್ಳುತ್ತೇವೆ. ನಮ್ಮ ಹೃದಯಗಳಲ್ಲಿ ಪಾಪವೆಂಬ ಮಹಾ ಅಲೆಯನ್ನು ಹಿಂದಕ್ಕೆ ಉರುಳಿಸುವ ದೇವರ ಯೋಜನೆಯ ಬಗ್ಗೆ ಅನುಕಂಪ ಹೆಚ್ಚುತ್ತದೆ. ಅದು ಪ್ರಪಂಚವನ್ನು ಮುಣುಗಿಸಿ ಅದರ ಸಂಬಳವಾದ ಮರಣವನ್ನು ತಂದಿದೆ. ಈ ಎರಡನೆಯ ಕಾಲು ಭಾಗದ ಗುರಿ ನಮ್ಮಲ್ಲಿ ಒಂದು ರೀತಿಯ ಚೈತನ್ಯವನ್ನುಂಟುಮಾಡುತ್ತದೆ. ಇದು ಪಾಪದ ವಿರುದ್ಧವಾದ ನೀತಿವಂತಿಕೆಯ ಚಟುವಟಿಕೆಯನ್ನು "ತೀವ್ರಗೊಳಿಸುವುದಾಗಿದೆ."

ನಮ್ಮ ಪ್ರೀತಿಯು ಬೆಳೆಯುತ್ತಿದೆ, ನಾವು ಮೂರನೆಯ ಕಾಲುಭಾಗದ ಗುರಿಯತ್ತ ಸಾಗುತ್ತೇವೆ. ನಾವು ಅಲ್ಲಿ ತಲಪುವಷ್ಟರಲ್ಲಿ ನಮ್ಮ ಕರ್ತವ್ಯ–ಪ್ರೀತಿ ಮತ್ತು ನೀತಿವಂತಿಕೆಯ ಸಿದ್ಧಾಂತಗಳ ಪ್ರೀತಿ ಇವುಗಳು ಕೂಡಿಕೊಂಡು ಪ್ರತಿಯೊಂದು ಕೆಡಕು ಸಂಗತಿಗಳು ಅಂದರೆ ಮಾನವಜಾತಿಗೆ ಹಾನಿ ಉಂಟುಮಾಡುವುದು, ದೇವರ ಗುಣಲಕ್ಷಣ ಮತ್ತು ಯೋಜನೆಗಳನ್ನು ಅಡ್ಡಿಪಡಿಸುವುದು ಮುಂತಾದುವುಗಳನ್ನು ಇಷ್ಟಪಡದಿರುವುದು ಮುಂತಾದವುಗಳು ನಮಗೆ ದೈವಿಕ ಗುಣಲಕ್ಷಣಗಳನ್ನು ವೃದ್ಧಿಪಡಿಸುತ್ತವೆ. ಜೊತೆಗೆ ಇಲ್ಲಿ ನಾವು ಇತರರ ಬಗ್ಗೆ ವಿಶಾಲವಾದ ಅನುಕಂಪವನ್ನು ಹೊಂದಿರುತ್ತೇವೆ. ನಾವು ದೇವರ ಚಿತ್ತವೃತ್ತಿಯನ್ನು ಅಂದರೆ ಪಾಪವನ್ನು ವಿರೊಧಿಸುವುದು ಮಾತ್ರವಲ್ಲ ನೀತಿವಂತಿಕೆ ಮತ್ತು ಪವಿತ್ರತೆಯನ್ನು ಬಯಸುವ ಎಲ್ಲರ ಬಗ್ಗೆ ಪ್ರೀತಿಯ ಮನೋಭಾವವನ್ನು ಪಡೆದಿರುತ್ತೇವೆ. ಆ ವೇಳೆಗೆ ನಾವು ಸಹೋದರರ ಬಗ್ಗೆ ಹಿಂದೆಂದೂ ಇಲ್ಲದ ಭಿನ್ನವಾದ ಬೆಳಕಿನಲ್ಲಿ ಗುರುತಿಸುತ್ತೇವೆ. ನಾವೀಗ ಅವರನ್ನು ನೂತನ ಸೃಷ್ಟಿಗಳೆಂದು ಮಾನ್ಯ ಮಾಡಿ ಅವರ ಮತ್ತು ಅವರ ಮರ್ತ್ಯ ಶರೀರಗಳ ಅಂತರವನ್ನು ಗುರುತಿಸುತ್ತೇವೆ. ಅದರ ಅಪರಿಪೂರ್ಣತೆಯು ನಮಗೆ ವಿಶದವಾಗಿರುತ್ತದೆ. ನಾವು ಸಹೋದರರನ್ನು ನೂತನ ಸೃಷ್ಟಿಗಳೆಂದು ಪ್ರೀತಿಸಲು ಕಲಿಯುತ್ತೇವೆ ಮತ್ತು ಅವರ ವಿವಿಧ ಶಾರೀರಿಕ ಬಲಹೀನತೆಗಳಲ್ಲಿ, ತಪ್ಪು ನಿರ್ಣಯ ಮುಂತಾದವುಗಳಲ್ಲಿ ಸಹಾನುಭೂತಿ ತೋರಿಸುತ್ತೇವೆ. ಅವರ ಬಗ್ಗೆ ನಮ್ಮ ಪ್ರೀತಿಯು ತೀವ್ರವಾಗಿದ್ದು ನಾವು ಅವರಿಗಾಗಿ ನಮ್ಮ ಪ್ರಾಣತೆರಲೂ, ಪ್ರತಿನಿತ್ಯ, ಪ್ರತಿ ಘಳಿಗೆ ನಾವು ನಮ್ಮ ಲೌಕೀಕ ಹಿತಾಸಕ್ತಿಗಳನ್ನು, ಸಂತೋಷವನ್ನೂ ಅನುಕೂಲತೆಗಳನ್ನೂ ತ್ಯಾಗಮಾಡಿ ನಮ್ಮ ಸಮಯ, ಪ್ರಭಾವ, ಇನ್ನೂ ಅನೇಕಾದವುಗಳನ್ನು ಅವರ ಸಹಾಯ ಮತ್ತು ಸೇವೆಗಾಗಿ ಸಮರ್ಪಿಸಲು ಸಂತೋಷವುಳ್ಳವರಾಗುತ್ತೇವೆ.

ಆದರೆ ನಾವು ಇನ್ನೂ ಸಹಾ ನಮ್ಮ "ಗುರಿ"ಯತ್ತ ಮುನ್ನುಗ್ಗುತ್ತೇವೆ. ಯಾಕೆಂದರೆ ಇದಕ್ಕೂ ಹೆಚ್ಚಾದ ಪ್ರೀತಿಯೊಂದಿದೆ. ಅದನ್ನು ನಾವು ನಾಲ್ಕನೆಯ ಕಾಲುಭಾಗ ಮತ್ತು ಗುರಿಯ ಅಂತಿಮ ಭಾಗದಲ್ಲಿ ಪಡಕೊಳ್ಳಬೇಕಾಗಿದೆ. ಇದು ಬಹುಮಾನ ಪಡಕೊಳ್ಳುವ ಗುರಿಯಾಗಿದೆ. ಇದು ಎಂಥಾಃ ಪ್ರೀತಿ? ದೇವರಿಗೆ ಮತ್ತು ನೀತಿನಿರ್ಣಯದ

ಸಿದ್ಧಾಂತಗಳಿಗೆ ಮತ್ತು ಪ್ರೀತಿಗೆ ಪೂರ್ಣ ಶ್ರದ್ಧೆಯಿಂದ ಕೂಡಿದವರಾಗಿ ಸಹೋದರರಿಗಾಗಿ ಪ್ರಾಣ ಅರ್ಪಿಸುವುದಕ್ಕಿಂತಲೂ ಈ ಪ್ರೀತಿ ಹೇಗೆ ದೊಡ್ಡದು? ನಾವು ಉತ್ತರಿಸುವುದೇನೆಂದರೆ, ನಮ್ಮ ಕರ್ತನು ನೀವು ವೈರಿಗಳನ್ನು ಸಹಾ ಪ್ರೀತಿಸಲು ಕಲಿಯಬೇಕು ಎಂದು ಬೋಧಿಸಿ ನಿಗಧಿ ಪಡಿಸಿದ ಪ್ರೀತಿ ಇದಾಗಿದೆ. ನಮ್ಮ ಕೆಟ್ಟಕ್ರಿಯೆಗಳಿಂದಾಗಿ ದೇವರಿಗೆ ವೈರಿಗಳೂ, ಅನ್ಯರೂ, ಅಪರಿಚಿತರೂ ಆಗಿದ್ದಾಗ ದೇವರು "ಲೋಕವನ್ನು ಎಷ್ಟೋ ಪ್ರೀತಿಸಿದನು"; "ನಾವು ಇನ್ನೂ ಪಾಪಿಗಳಾಗಿದ್ದಾಗಲೇ ತನ್ನ ಒಬ್ಬನೇ ಮಗನನ್ನು ನಮ್ಮ ಸಲುವಾಗಿ ಕೊಟ್ಟನು". ಇದೇ ಪರಿಪೂರ್ಣವಾದ ಪ್ರೀತಿಯ ಮಟ್ಟವಾಗಿದೆ. ನಾವು ಅದರ ಕೆಳಮಟ್ಟದಲ್ಲಿ ನಿಲ್ಲಬಾರದು. ನೂತನ ಸೃಷ್ಟಿಯ ಸದಸ್ಯರಾಗಿ ಯಾರು ಕರ್ತನಿಂದ ಅಂಗೀಕರಿಸಲ್ಪಡುತ್ತಾರೋ ಅವರೆಲ್ಲರೂ ವೈರಿಗಳನ್ನು ಪ್ರೀತಿಸುವ ಸ್ವಭಾವವನ್ನು ಹೊಂದಿಕೊಳ್ಳಲೇಬೇಕು.

ಒಬ್ಬನು ತನ್ನ ಸಹೋದರರನ್ನು ಪ್ರೀತಿಸಿದಂತೆಯೇ ತನ್ನ ವೈರಿಗಳನ್ನು ಪ್ರೀತಿಸಬೇಕೆಂತಿಲ್ಲ. ಈ ಆದರ್ಶವಾದ ಮಾದರಿಯನ್ನು ನಮ್ಮ ಮುಂದೆ ಇಟ್ಟಿಲ್ಲ. ದೇವರು ತನ್ನ ಪುತ್ರರನ್ನು, ಸ್ನೇಹಿತರನ್ನು ಪ್ರೀತಿಸಿದಂತೆಯೇ ತನ್ನ ವೈರಿಗಳನ್ನು ಪ್ರೀತಿಸಲಿಲ್ಲ. ಯೇಸು ತನ್ನ ಶಿಷ್ಯರನ್ನು ಪ್ರೀತಿಸಿದಂತೆಯೇ ತನ್ನ ವೈರಿಗಳನ್ನು ಪ್ರೀತಿಸಲಿಲ್ಲ. ಆದರೆ ದೇವರು ತನ್ನ ವೈರಿಗಳಿಗೆ ಉಚಿತವಾದುದನ್ನು ಇಚ್ಛಾಪೂರ್ವಕವಾಗಿ ಮತ್ತು ಸಿದ್ಧವಾಗಿ ಮಾಡುವಷ್ಟರ ಮಟ್ಟಿಗೆ ಪ್ರೀತಿಸಿದನು. ಯೇಸು ತನ್ನ ವೈರಿಗಳನ್ನು ಪ್ರೀತಿಸಿದ್ದೆಂದರೆ ಆತನು ಮನಃಪೂರ್ವಕವಾಗಿ ಅವರಿಗೆ ಒಳ್ಳೆಯದನ್ನು ಮಾಡಲು ಬಯಸಿದನು. ಅವರ ದ್ವೇಷಕ್ಕೆ ಬದಲಾಗಿ ಆತನಲ್ಲಿ ಯಾವುದೇ ವೈರತ್ವವಾಗಲೀ, ಮತ್ಸರವಾಗಲೀ ಇರಲಿಲ್ಲ. ಅವರೆಲ್ಲರೂ ಸತ್ಯದ ಜ್ಞಾನಕ್ಕೆ ಬರುವಂತೆ ಆತನು ಸೂಕ್ತಸಮಯದಲ್ಲಿ ಅವರ ಮೇಲೆ ಸಹಸ್ರ ವರ್ಷಗಳ ಧರ್ಮಯುಗದ ದಿವ್ಯಾಶೀರ್ವಾದಗಳನ್ನು ಸುರಿಸಲು ಸಿದ್ಧನಾಗಿದ್ದನು. ಆತನನ್ನು ಇರಿದವರು ಸಹಾ ಆತನೆಡೆಗೆ ನೋಡಿ ಕಣ್ಣೀರು ಸುರಿಸುವಾಗ ಅವರ ಮೇಲೆ ತಕ್ಕ ಸಮಯದಲ್ಲಿ ಪ್ರಾರ್ಥನಾ ಸ್ಫೂರ್ತಿಯನ್ನು ಮತ್ತು ಬಿನ್ನಹಗಳನ್ನು ಸುರಿಸಿದನು. (ಜೆಕರ್ಯ 12:10) "ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ" (ಮತ್ತಾಯ 5:44) ಎಂದು ನಮ್ಮ ಕರ್ತನು ವಿವರಿಸುವಂತೆ ವೈರಿಗಳ ಬಗ್ಗೆ ನಮ್ಮ ಪ್ರೀತಿಯು ಇರತಕ್ಕದ್ದು. ಯಾವುದೇ ಕಹಿಭಾವನೆ, ಕಡುಮಾತ್ಸರ್ಯ ಅಥವಾ ಬದ್ಧದ್ವೇಷವಾಗಲೀ ನಮ್ಮ ಹೃದಯಗಳಲ್ಲಿ ಇರಬಾರದು. ಅದು ಪ್ರೀತಿಯಿಂದ ತುಂಬಿಕೊಂಡಿದ್ದು ಯಾವ ವೈರಿಯಾದರೂ ನಮ್ಮ ಹೃದಯಗಳಲ್ಲಿ ಕೆಡುಕಿನ, ಮತ್ಸರದ ಭಾವನೆಗಳನ್ನು ಕದಡಬಾರದು.

ಅಹಾ! ವೈರಿಯಲ್ಲಿಯೂ ಸಹಾ ಹಗೆ, ದ್ವೇಷ ಅಥವಾ ಕಚ್ಚಾಟ ಇದ್ಯಾವುದನ್ನೂ ಕದಡದ ಎಂತಹ ದೀರ್ಘ ಸಹನೆ ಮತ್ತು ಸಹೋದರ ಕರುಣೆಯು ಈ ಗುಣಲಕ್ಷಣಗಳ ಸಾಧನೆಯಲ್ಲಿ ಅಗತ್ಯವಾಗಿದೆ! ನೂತನ ಸೃಷ್ಟಿಗಳಾದ ನಾವು ಓಡಬೇಕಾದ ಗುರಿಯು ಇದೇ ಆಗಿದೆ. ನಾವು ಪ್ರೀತಿಯ ಸ್ಫೂರ್ತಿಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇವೆ. ನಾವು ಅದರ ಬಗ್ಗೆ ನಿಷ್ಠೆಯನ್ನೂ ಪ್ರಕಟಿಸಿದ್ದೇವೆ. ನಾವು ಇದರ ತತ್ವವಿಧಿಗನುಸಾರವಾಗಿ ನಮ್ಮ ಜೀವನವನ್ನು ಪ್ರತಿಷ್ಠಿಸಿಕೊಂಡಿದ್ದೇವೆ. ನಮ್ಮ ಈ ಹೇಳಿಕೆಗಳು ಎಷ್ಟರಮಟ್ಟಿಗೆ ಸತ್ಯವಾಗಿದೆಯೆಂಬ ಪರೀಕ್ಷೆಗೆ ನಾವೀಗ ಒಳಗಾಗಿದ್ದೇವೆ. ದೇವರು ಬಹು ಕೃಪಾಪೂರ್ಣನಾಗಿ ನಮಗೆ ಈ ಓಟವನ್ನು, ಓಡುವ ಈ ಗುಣಲಕ್ಷಣವನ್ನು ಬೆಳೆಸಿಕೊಳ್ಳುವ ಸಮಯವನ್ನು ಕೊಟ್ಟಿದ್ದಾನೆ. "ಆತನು ನಮ್ಮ ಪ್ರಕೃತಿಯನ್ನು ಬಲ್ಲನು, ನಾವು ಧೂಳಿಯಾಗಿದ್ದೇವೆಂಬುದನ್ನು ನೆನಪುಮಾಡಿಕೊಳ್ಳುತ್ತಾನೆ" (ಕೀರ್ತನೆ103:14). ಆದಾಗ್ಯೂ ನಾವು ನೂತನ ಸೃಷ್ಟಿಗಳಾಗಿ ದೇವರ ಪ್ರಿಯ ಕುಮಾರನೊಂದಿಗೆ ಈ ವ್ಯವಸ್ಥೆಗಳ ಜೊತೆವಾರಸುದಾರರಾಗಬೇಕಾದ್ದಲ್ಲಿ ಅವುಗಳಿಗೆ ಹೊಂದಿಕೊಳ್ಳಲೇಬೇಕು.

ನಮ್ಮ ರಕ್ಷಣೆಯ ನಾಯಕನಾದ ಕರ್ತನಾದ ಯೇಸುವು ಈ ಓಟವನ್ನು ಓಡಬೇಕಾದ್ದಿಲ್ಲ; ಪ್ರೀತಿಯ ಈ ವಿವಿಧ ಲಕ್ಷಣಗಳನ್ನು ಬೆಳೆಸಿಕೊಳ್ಳಬೇಕಾದುದ್ದಿಲ್ಲ; ಆತನು ಪರಿಪೂರ್ಣನಾಗಿದ್ದರಿಂದ ಆತನು ತನ್ನ ಉದ್ಯೋಗದ ಪ್ರಾರಂಭದಲ್ಲಿಯೇ ಈ ವಿಷಯಗಳಲ್ಲಿ ಪರಿಪೂರ್ಣನಾಗಿದ್ದನು. ಆತನ ಪರೀಕ್ಷೆಯೆಂದರೆ, ಆತನು ಈ ತತ್ವ ಸಿದ್ಧಾಂತಗಳಲ್ಲಿ ಗುಣಲಕ್ಷಣಗಳಲ್ಲಿ ಧೃಡವಾಗಿ ನಿಲ್ಲುವನೋ ಇಲ್ಲವೋ ದೇವರ ಮತ್ತು ನೀತಿವಂತಿಕೆಯ ಪ್ರೀತಿಯಲ್ಲಿ ಅಮೋಘವಾಗಿ ಮುಂದುವರೆಯುತ್ತಾನೋ ಇಲ್ಲವೋ ಮತ್ತು ಸಹೋದರರ ಪ್ರೀತಿಯಲ್ಲಿ ಅವರಿಗಾಗಿ ಪ್ರಾಣ ತೆತ್ತುವಷ್ಟರ ಮಟ್ಟಿಗೆ ಮುಂದುವರೆಯುವನೋ, ಮತ್ತು ಆತನು ತನ್ನ ವೈರಿಗಳನ್ನು ಸಹಾ ಪ್ರೀತಿಸಿ ಅವರಿಗೆ ಒಳ್ಳೇಯದನ್ನು ಮಾಡುವುದರಲ್ಲಿ ಸಂತೋಷಿಸುವನೋ ಇಲ್ಲವೋ, ಆತನ ಸಮರ್ಪಕವಾದ ಪ್ರೀತಿಯ ಪ್ರಮಾಣದಲ್ಲಿ ಸ್ಥಿರವಾಗಿ ನಿಲ್ಲುವನೋ ಇಲ್ಲವೋ ಎಂಬುದೇ. ಆತನು ಎಲ್ಲಾ ಮಟ್ಟಗಳಲ್ಲಿ ಯಾವ ರೀತಿ ಪ್ರೀತಿಯ ಬಗ್ಗೆ ತನ್ನ ಶ್ರದ್ಧೆಯನ್ನು ನಿರೂಪಿಸಿದನೆಂದು ನಾವು ತಿಳಿದಿದ್ದೇವೆ. ಇದರಲ್ಲಿ ಆತನು ತನ್ನ ಪ್ರಾಣವನ್ನು ತನ್ನ ಸ್ನೇಹಿತರಿಗಾಗಿ ಮಾತ್ರವಲ್ಲ ಶಿಲುಬೆಯಲ್ಲಿ ತನ್ನನ್ನು ಜಡಿದ ವೈರಿಗಳಿಗಾಗಿಯೂ ಅರ್ಪಿಸಿದನೆಂದು ನಾವು ತಿಳಿಯುತ್ತೇವೆ. ಇಂತಹ ಅನುಭವವು ನಮ್ಮದಾಗಬೇಕು. ನಮ್ಮ ದೇಹವು ಹೃದಯಗಳ ಭಾವನೆಗಳನ್ನು ಪೂರ್ಣವಾಗಿ ತಿಳಿಸಲು ಅಸಮರ್ಥವಾಗಿದ್ದರೂ ನಮ್ಮ ಹೃದಯಗಳಲ್ಲಿ ಸಮರ್ಪಕವಾದ ಪ್ರೀತಿಯ ಮಟ್ಟವನ್ನು ಗಳಿಸಿಕೊಳ್ಳಬೇಕು. ನಾವು ದೇಹಧಾರಿಗಳಾಗಿ ನಮ್ಮ ಪೂರ್ಣವಾದ ರೀತಿಯಲ್ಲಿ ತಿಳಿಸಲು ಅಸಮರ್ಥರಾಗಿದ್ದೇವೆ.

ಕೆಲವರು ತಮ್ಮ ಓಟದ ಈ ಕಾಲು ಭಾಗದ ಗುರಿಗಳನ್ನು ಒಂದರ ನಂತರ ಒಂದು ಕ್ರಮಿಸುತ್ತಾ ತೀವ್ರಗತಿಯಿಂದ ಓಡಬಹುದು. ಅವರು ಸಮರ್ಪಕವಾದ ಪ್ರೀತಿಯ ಸ್ಥಿತಿಯನ್ನು ಬೇಗನೇ ತಲುಪಬಹುದು. ಮತ್ತೆ ಕೆಲವರು ಕಡಿಮೆ ಉತ್ಸಾಹಭರಿತರಾಗಿದ್ದು ಅಥವಾ ನಮ್ಮ ನಂಬಿಕೆ ಹುಟ್ಟಿಸುವಾತನಿಗೆ ಸ್ವಲ್ಪ ಕಡಿಮೆ ನಿಷ್ಠೆಯ ನಿಮಿತ್ತ ಓಟದಲ್ಲಿ ನಿಧಾನಗತಿಯಲ್ಲಿ ಪ್ರಗತಿ ತೋರುತ್ತಾರೆ ಮತ್ತು ವರ್ಷಗಟ್ಟಲೆ ಕರ್ತವ್ಯ ಬದ್ಧ ಪ್ರೀತಿಯಲ್ಲಿಯೇ ತೃಪ್ತರಾಗಿರುತ್ತಾರೆ ಅಥವಾ ಸ್ವಲ್ಪ ಮುಂದುವರೆದು ದೈವಿಕ ಲಕ್ಷಣಗಳನ್ನು, ನೀತಿವಂತಿಕೆಯ ಲಕ್ಷಣಗಳನ್ನು ಪ್ರೀತಿಸತೊಡಗುತ್ತಾರೆ. ಗಮನೀಯವಾಗಿ

ಕೆಲವರು ಇದನ್ನು ದಾಟಿ ಸಹೋದರ ಪ್ರೀತಿಯನ್ನು ಗಳಿಸುತ್ತಾರೆ ಇದು ಅವರಿಗೆ ಸ್ವಾರ್ಥತ್ಯಾಗ ಮಾಡುವಲ್ಲಿ ಸಂತೋಷವನ್ನೀಯುತ್ತದೆ. ಈ ರೀತಿಯಾಗಿ ಅವರು ನಂಬಿಗಸ್ತ ಮನೆವಾರ್ತೆಯವರ ಸೇವೆ ಮಾಡಬಹುದಾಗಿದೆ. ಇನ್ನೂ ಕೆಲವರು ಸಮರ್ಪಕವಾದ ಪ್ರೀತಿಯ ಹಂತಕ್ಕೆ ಹೋಗಿರುತ್ತಾರೆ. ಅಂದರೆ ಅವರು ವೈರಿಗಳಿಗಾಗಿ ತೋರಿಸಿದ್ದ ಪ್ರೀತಿ. ಇದು ಅವರನ್ನು ಮಾತು ಮತ್ತು ಕ್ರಿಯೆಗಳ ಮೂಲಕ ಹಾನಿಯಿಂದ ತಡೆಯುವುದಲ್ಲದೆ ಇದಕ್ಕೂ ಹೆಚ್ಚಾಗಿ ಅವರ ಆಶೀರ್ವಾದಗಳಲ್ಲಿ ಸಂತೋಷವನ್ನುಂಟು ಮಾಡುವುದಾಗಿದೆ. ಕರ್ತನು ನಮ್ಮೊಡನೆ ಬಹಳ ತಾಳ್ಮೆಯಿಂದ ಇರುವುದಾಗಿದ್ದು ನಮ್ಮ ಗುರಿಯನ್ನು ತಲುಪಲು ಸಾಕಷ್ಟು ಅವಕಾಶಗಳನ್ನು ನೀಡುವುದಾದಲ್ಲಿ ನಾವು ಆತನ ಸ್ವಂತ ಅನುಕಂಪದಲ್ಲಿ ಸಂತೋಷಿಸಬೇಕು ಮತ್ತು ಕಾಲವು ಸ್ವಲ್ಪವಾಗಿದೆ ಮತ್ತು ಸಮರ್ಪಕವಾದ ಪ್ರೀತಿಗಿಂತ ಕಡಿಮೆಯಾದ ಯಾವುದೂ ತಂದೆಯಿಂದ ನೂತನ ಸೃಷ್ಟಿಯಲ್ಲಿ ಅಂಗೀಕಾರವಾಗದು ಎಂದು ನೆನಪಿನಲ್ಲಿಟ್ಟುಕೊಂಡು ಹೆಚ್ಚು ಉತ್ಸಾಹಶಾಲಿಗಳಾಗಿ ಬಹುಮಾನದ ಗುರಿಯನ್ನು ಮುಟ್ಟಬೇಕು.

ನಮ್ಮ ಕರ್ತನು ಸಮರ್ಪಕವಾದ ಪ್ರೀತಿಯ "ಗುರಿಯಲ್ಲಿ" ಪರೀಕ್ಷೆಗೆ ಒಳಗಾದಂತೆಯೇ ಅದನ್ನು ತಲುಪಿದ ಮೇಲೆ ನಾವೆಲ್ಲರೂ ಅಂಥಹ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ಆದುದರಿಂದ ನಾವು ನಮ್ಮ ಜೀವಿತದ ಕಡೆ ಉಸಿರಿನ ಸಮಯದಲ್ಲಿ ಈ ಗುರಿಯನ್ನು ಮುಟ್ಟುವೆಂದು ನಿರೀಕ್ಷಿಸಬಾರದು; ಆದರೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೇ ನಾವು ಅದನ್ನು ತಲುಪಬೇಕು. ನಾವು ಯಾವ ವೇಗದಲ್ಲಿ ಈ ಗುರಿಯನ್ನು ತಲಪುತ್ತೇವೋ ಅದು ನಮ್ಮ ಉತ್ಸಾಹದ ಮಟ್ಟವನ್ನು ಮತ್ತು ಪ್ರೀತಿಯನ್ನು ದೇವರಿಗೆ ಮತ್ತು ಸಹೋದರರುಗಳಿಗೆ ತೋರಿಸುವುದಾಗಿದೆ.

ಅಪೋಸ್ತಲನು ಹೇಳುವಂತೆ "ಮಾಡಬೇಕಾದುದೆಲ್ಲವನ್ನೂ ಮಾಡಿ ಜಯಶಾಲಿಗಳಾಗಿ ನಿಲ್ಲುವುದಕ್ಕೂ..." (ಎಫೆಸ. 6:13) ಎಂಬ ಮಾತು ನಾವು ಪೂರ್ಣವಾದ ಪ್ರೀತಿಯೆಂಬ ಗುರಿಯನ್ನು ತಲುಪಿದ ಮೇಲೆಯೂ ಬಹಳಷ್ಟು ಶೋಧನೆಗಳನ್ನು ಅಂದರೆ ನಂಬಿಕೆಯ ಶೋಧನೆ, ತಾಳ್ಮೆಯ ಶೋಧನೆ, ಪ್ರೀತಿಯ ಎಲ್ಲಾ ಸಂಗತಿಗಳಲ್ಲಿನ ಶೋಧನೆಗಳನ್ನು ನಾವು ಎದುರಿಸಬೇಕಾಗುವುದು ಎಂಬ ಅಭಿಪ್ರಾಯವನ್ನು ನೀಡುತ್ತದೆ. ಈ ಲೋಕವು ಕೃಪೆಯ ಸ್ನೇಹಿತನಲ್ಲ, ನಮ್ಮನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುವುದಿಲ್ಲ. ಸೈತಾನನು ಇನ್ನೂ ಸಹಾ ನಮ್ಮ ವಿರೋಧಿಯಾಗಿದ್ದಾನೆ ಮತ್ತು ಬಹಳಷ್ಟು ವಿರೋಧಗಳನ್ನು ಕದಡುವವನಾಗಿದ್ದು ನಾವು ಗಳಿಸಿದ ಸ್ಥಾನದಿಂದ ಹಿಂತಿರುಗಿಸಲು ಪ್ರಯತ್ನಿಸುತ್ತಿದ್ದಾನೆ. ಇದು ನಮ್ಮ ಪರೀಕ್ಷೆಯಾಗಿದೆ. ನಾವು ಗಳಿಸಿದ್ದನ್ನು ಭಧ್ರವಾಗಿ ಕಾಪಾಡಿಕೊಳ್ಳಬೇಕು. ಈ ಲೋಕದ ಪ್ರಾಣದ ಬೆಲೆ ತೆರುವವರೆಗೂ ನಾವು ನಮ್ಮ ಗುರಿಯತ್ತ ಎದೆಬಗ್ಗಿದವರಾಗಿ ಓಡುತ್ತಿರಬೇಕು – ದೇವರ ಸೇವೆಯಲ್ಲಿ ನಮ್ಮ ಸಹೋದರರಿಗಾಗಿ ಪ್ರಾಣ ಅರ್ಪಿಸುವುದು ಮತ್ತು ನಮಗೆ ಅವಕಾಶ ದೊರೆತಂತೆ ಎಲ್ಲರಿಗೂ ಒಳ್ಳೆಯದನ್ನು ಮಾಡುವುದು. "ನಿಮ್ಮನ್ನು ಕರೆಯುವವನು ನಂಬಿಗಸ್ತನು" (1 ಥೆಸ. 5:24) ಆತನು ಈ ರೀತಿಯಲ್ಲಿ ನಮ್ಮ ಎಲ್ಲಾ ಅಗತ್ಯತೆಗಳನ್ನು ಪೂರೈಸುವನು–"ನನ್ನ ಕೃಪೆಯೇ ನಿನಗೆ ಸಾಕು" (2 ಕೊರಿಂಥದವರಿಗೆ 12:9).

ಈ ಪ್ರೀತಿಯ ಕಾನೂನನ್ನು ನಾವಿಗಾಗಲೇ ನೋಡಿದ್ದೇವೆ. ಇದು ದೇವರ ದೈವಸ್ವರೂಪದ ಪುತ್ರರಿಗಾಗಿರುವ ಕಾನೂನಾಗಿದೆ – ದೇವರ ಚಿತ್ತಕ್ಕೆ ಅವರ ವಿಧೇಯತೆ ಮತ್ತು ಪರಸ್ಪರ ಅವರ ಹೊಂದಾಣಿಕೆ ಇವುಗಳೆಲ್ಲವೂ ಈ ಕಾನೂನಿನ ಮೇಲೆ ಆತುಕೊಂಡಿದೆ. ಧರ್ಮಯುಗದ ಕಾಲದಲ್ಲಿಯೂ ಮಾನವ ಜಾತಿಯ ಮೇಲೆ ಕಾನೂನುಗಳು, ವಿಶೇಷ ಕಾಯಿದೆಗಳು, ನಿಯಮಗಳು, ಬಲವಂತಪಡಿಸುವಿಕೆ ಮುಂತಾದವುಗಳು ಅವರನ್ನು ಧರ್ಮಯುಗದ ರಾಜ್ಯಭಾರದ ಆಶೀರ್ವಾದ ವ್ಯವಸ್ಥೆಗಳಿಗೆ ತರುವಂತೆ ಹೇರಲಾಗುವುದು. ಆದರೆ ಸಹಸ್ರ ವರ್ಷಗಳ ಧರ್ಮಯುಗದ ಅಂತ್ಯದಲ್ಲಿ ನಿತ್ಯಜೀವಕ್ಕೆ ಅರ್ಹರೆಂದು ಯಾರು ಪರಿಗಣಿಸಲ್ಪಡುತ್ತಾರೋ ಅವರು ಈ ನಿಯಮಗಳಿಗೆ ಕೇವಲ ವಿಧೇಯರಾಗುವುದಕ್ಕೂ ಮೀರಿದ್ದಾರೆಂದು ನಿಶ್ಚಯವಾಗಿಯೂ ತಿಳಿಯಬಹುದು ಮತ್ತು ಹೃದಯಗಳ ಮೇಲೆ ದೇವರ ನಿಯಮ, ಅದಕ್ಕೆ ವಿಧೇಯತೆ ಮತ್ತು ಪ್ರೀತಿಯ ನಿಯಮಗಳು ಬರೆಯಲ್ಪಟ್ಟಿರುತ್ತವೆ ಮತ್ತು ಇವುಗಳು ದೈವ ಲಕ್ಷಣದ ಭಾಗವಾಗಿವೆ. ಮಾನವ ನೆಲೆಯಲ್ಲಿ ಪುನಃ ವಶಗೊಂಡ ಈ ದೇವರ ಪುತ್ರರ ನಂತರ ಆತನಿಂದ ಅಂಗೀಕಾರಗೊಂಡು ಈ ಪ್ರೀತಿಯ ಚೈತನ್ಯವನ್ನು ಪಡಕೊಂಡಿರುತ್ತಾರೆ. ಇದಿಲ್ಲದೆ ಅವರು ದೇವರನ್ನು ತೃಪ್ತಿಗೊಳಿಸಲು ಸಾಧ್ಯವಿಲ್ಲ ಯಾಕೆಂದರೆ ಆತನು ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕಂತೆ ಆರಾಧಿಸುವವರನ್ನು ಬಯಸುತ್ತಾನೆ. ಆದುದರಿಂದ ಭೂಲೋಕ ಹಾಗೂ ಪರಲೋಕಗಳಿಗೆ ಕಾನೂನು ಇರುವಾಗ ಮತ್ತು ಅದಕ್ಕೆ ವಿಧೇಯತೆಯ ಅವಶ್ಯಕತೆ ಇರುವಾಗ, ನಮ್ಮ ಲೌಕಿಕ ಮತ್ತು ಅಸಮರ್ಪಕವಾದ ಭಾವನೆಗಳಿಗಿಂತ ದೈವಿಕ ವಿಧೇಯತೆಯ ನಿಯಮವು ಇನ್ನೂ ಹೆಚ್ಚಿನದಾಗಿದ್ದು ಪ್ರೀತಿಯೆಂಬ ಒಂದೇ ಪದವು ದೇವರ ಸಮಗ್ರವಾದ ಪ್ರೀತಿಯ ನಿಯಮವನ್ನು ತಿಳಿಸುತ್ತದೆ. ಇದಕ್ಕೆ ಎಲ್ಲಾ ನೆಲೆಯಲ್ಲಿರುವ ಆತನ ಮಕ್ಕಳೆಲ್ಲರೂ ಬದ್ಧರಾಗಿರುತ್ತಾರೆ. ದೇವರ ಯೋಜನೆಯ ಲಕ್ಷಣವು ಎಷ್ಟೋ ಅದ್ಭುತ, ಎಷ್ಟೋ ವೈಭವಯುತ!. ಆತನ ನಿಯಮವನ್ನು ಪಾಲಿಸುವುದೇ ಪ್ರೀತಿಯಾಗಿದೆ; ಇದಕ್ಕಿಂತ ಹೆಚ್ಚಿನ ನಿಯಮವನ್ನು ನಾವು ಗ್ರಹಿಸಲಾಗುವುದಿಲ್ಲ.

ನಾವು ಸಾರಾಂಶವಾಗಿ ಇದುವರೆಗೆ ವಿಷಯವನ್ನು ಪ್ರಸ್ತಾಪಿಸಿದ್ದೇವೆ. ನಾವೀಗ ಗಮನಿಸ ಬಯಸುವುದೇನೆಂದರೆ, ನೂತನ ಸೃಷ್ಟಿಯು ಮಾಂಸಿಕ ಶರೀರವೆಂಬ ಗುಡಾರದಲ್ಲಿ ಇನ್ನೂ ವಾಸಿಸುತ್ತಿರುವಾಗ, ಮತ್ತು ಹೆಚ್ಚುಕಡಿಮೆ ಅದರ ಬಲಹೀನತೆಗಳಿಗೆ ತುತ್ತಾಗುತ್ತಿರುವಾಗ ಈ ಪ್ರೀತಿಯ ನಿಮಯದಿಂದ ಪರಸ್ಪರರ ಮತ್ತು ಈ ಲೋಕದವರ ಬಗ್ಗೆ ಅವು ತಮ್ಮನ್ನು ಕ್ರಮಪಡಿಸಿಕೊಳ್ಳಬೇಕು. ಈ ನೂತನ ನಿಯಮವನ್ನು ಕರ್ತನು ತನ್ನನ್ನು ಅನುಸರಿಸುವವರೆಲ್ಲರಿಗೂ ನೀಡಿದ್ದಾನೆ ಮತ್ತು ಇದನ್ನು "ಸುವರ್ಣ ನಿಯಮ" ಎಂದು ಬಹಳ ಚಂದವಾಗಿ ಕರೆಯಲಾಗಿದೆ.

## ಸುವರ್ಣ ನಿಯಮ (The Golden Rule)

ನಾವೀಗಾಗಲೇ ನೋಡಿದಂತೆ ಸುವರ್ಣ (ಚಿನ್ನ) ಎಂಬುದು ದೈವಿಕವಾದವುಗಳೆಲ್ಲದರ ಸಂಕೇತವಾಗಿದೆ. ಆದುದರಿಂದ ಸುವರ್ಣ ನಿಯಮವೆಂದರೆ ದೈವಿಕ ನಿಯಮವೇ

ಆಗಿದೆ. ನಾವೀಗತಾನೇ ಕಂಡುಕೊಂಡಂತೆ ದೇವರ ಕಾನೂನು ಅಥವಾ ಪ್ರೀತಿಗಿಂತ ನ್ಯಾಯದ ನಿಯಮವಾಗಿದೆ. "ನಿನ್ನ ನೆರೆಯವನು ನಿನಗೆ ಮಾಡಬಾರದ್ದನ್ನು ಆತನಿಗೂ ನೀನು ಮಾಡಬಾರದು"ಎಂಬುದು ಸ್ವಾಭಾವಿಕ ಮಾನವನು ನಿಜವಾಗಿಯೂ ಮೆಚ್ಚಿಕೊಳ್ಳಬಹುದಾದ ಈ ಸುವರ್ಣ ನಿಯಮವನ್ನು ನಿಕಟವಾಗಿ ಸಮೀಪಿಸಲು ಆತನಿಗೆ ಪರಿಚಯವಿರುವ ಅತ್ಯುನ್ನತ ಮಟ್ಟದ ಮಾರ್ಗವಾಗಿದೆ. ಇದು ಹೆಚ್ಚಾಗಿ ನಕರಾತ್ಮಕವಾದ ಒಳ್ಳೆಯತನವಾದರೂ ಪ್ರೀತಿಯ ಸುವರ್ಣ ನಿಯಮವಾಗಿದ್ದು ಇದನ್ನು ಕರ್ತನು ತನ್ನ ನೂತನ ಸೃಷ್ಟಿಗಳಿಗೆ ಇಂದು ನೀಡುವವನಾಗಿದ್ದಾನೆ ಮತ್ತು ಇದನ್ನು ನೂತನ ಸೃಷ್ಟಿಗಳಲ್ಲದೆ ಬೇರೆ ಯಾರೂ ಮೆಚ್ಚುವುದಿಲ್ಲ ಅಥವಾ ಅದರ ಸಕರಾತ್ಮಕ ರೂಪವಾದ "ಇತರರು ನಿಮಗೆ ಮಾಡಬೇಕೆಂದು ಬಯಸುವುದನ್ನು ನೀವೇ ಅವರಿಗೆ ಮಾಡಿರಿ" ಎಂಬ ಮಾತುಗಳನ್ನು ಸಹಾ ಅರ್ಥ ಮಾಡಿಕೊಳ್ಳಲಾರರು. ಇದು ಸಕರಾತ್ಮಕವಾದ ಒಳ್ಳೆಯತನ, ಸಜೀವವುಳ್ಳದ್ದು, ಕ್ರಿಯಾತ್ಮಕವಾದ ಪ್ರೀತಿಯಾಗಿದೆ. ನೂತನ ಸೃಷ್ಟಿಯ ಸದಸ್ಯರು ಅವರ ಅಸ್ಥಿತ್ವದ ಈ ಸುವರ್ಣ ನಿಯಮದ ಪ್ರತಿಯೊಂದು ಲಕ್ಷಣವನ್ನು ನ್ಯಾಯದ ಸಾಧಾರಣ ನಿಯಮವನ್ನು ಪಾಲಿಸಲು ವಿಫಲರಾಗುವಲ್ಲಿ ಅವರು ನೂತನ ಮಾರ್ಗದಲ್ಲಿನ ಶಿಶುಗಳಾಗದೆ ಇದ್ದಲ್ಲಿ ಅದು ಅವರ ಕಠಿಣ ರೀತಿಯ ವಿಷಾದಕರ ಹಾಗೂ ಖೇದದ ಸಂಗತಿಯೆನಿಸುತ್ತದೆ. ಈ ನಿಯಮದ ಯಾವುದೇ ಉಲ್ಲಂಘನೆಯು ವೇದನೆ ಮತ್ತು ವಿಷಾದವನ್ನುಂಟು ಮಾಡುವುದಾದರೆ ಆಗ ಆಂತಹ ಉಲ್ಲಂಘನೆಯು ಉದ್ಧೇಶ ಪೂರ್ವಕವಾದುದಲ್ಲ, ಹೃತ್ಪೂರ್ವಕವಾದುದಲ್ಲ ಮತ್ತು ನೂತನ ಸೃಷ್ಟಿಯು ತತ್ವವನ್ನು ನಿರಾಕರಿಸಿಲ್ಲವೆಂಬ ಸ್ಪಷ್ಟವಾದ ಸಂಕೇತವಾಗುತ್ತದೆ. ಹೆಚ್ಚೆಂದರೆ, ಇದು ಗಮನಕ್ಕೆ ಬಾರದ ರೀತಿಯಲ್ಲಿ ದೇಹವು ಎಡವಿಬೀಳುವ ಉದ್ದೇಶ ಅಥವಾ ಸ್ಫೂರ್ತಿಯ ಆಕಾಂಕ್ಷೆಗಳಿಗೆ ವಿರುದ್ಧವಾದುದಾಗಿದೆ. ಹೀಗಿದ್ದಾಗ್ಯೂ ನೂತನ ಮನಸ್ಸು ದೇವರ ಕಡೆಗೆ ಜೀವವುಳ್ಳದ್ದಾಗಿರುವ ಅನುಪಾತದಲ್ಲಿಯೇ ಆತನ ಚಿತ್ತವನ್ನು ನೆರವೇರಿಸುವಲ್ಲಿ ಆಸಕ್ತವಾಗಿದ್ದು ಅದು ವಾಸಮಾಡುವ "ಮಣ್ಣಿನ ಶರೀರ"ವನ್ನು ಕಾಪಾಡಿಕೊಳ್ಳುವಲ್ಲಿ ತ್ವರಿತವುಳ್ಳದ್ದೂ, ಜಾಗರೂಕವೂ, ಚೈತನ್ಯದಾಯಕವೂ ಆಗಿರುತ್ತದೆ. ಅದು ಶರೀರದ ಬಲಹೀನತೆಗಳ ವಿರುದ್ಧ ಹೋರಾಡಲು ದೇವರು ದಯಪಾಲಿಸುವ ಸರ್ವಾಯುಧಗಳನ್ನು ಬಳಸುತ್ತದೆ. ಮಾತಿನಲ್ಲಾಗಲೀ, ಕ್ರಿಯೆಯಲ್ಲಾಗಲೀ ಯಾವುದೊಂದು ತಪ್ಪಾದರೆ, ಹಿತಕರವಾದ ಒಳ್ಳೆಯ ಭಾವನೆಯಿಂದ ಸಾದ್ಯವಾದರೆ ತಕ್ಷಣವೇ ನಷ್ಟಪರಿಹಾರವನ್ನು ಅದು ಒತ್ತಾಯಿಸುವುದು. "ಮಣ್ಣಿನ ಘಟವು" ತನಗೆ ವಿರೋಧವನ್ನೂ, ನಾಚಿಕೆ ಉಂಟಾಗುವುದನ್ನೂ ನೂತನಮನಸ್ಸನ್ನು ಕಡಿಮೆ ವಿರೋಧಿಸುವುದರಲ್ಲಿ ಕಾರ್ಯಶೀಲವಾಗುವುದು.

ಈ ದೈವ ಕಾನೂನು ನೂತನ ಸೃಷ್ಟಿಗಳಲ್ಲಿ ದೇವರೊಂದಿಗಿರುವ ಸಂಬಂಧದ ಮೇಲೆ ಪರಿಣಾಮ ಬೀರುವುದು. ಅವನು ಕರ್ತನನ್ನು – ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸು ಎಂಬ ಹೇಳಿಕೆಯ ಅರ್ಥವನ್ನು ಪರಿಗಣಿಸುವನು. ಇಲ್ಲಿ ತಾನು ದೇವರೊಂದಿಗೆ ಸಮಾಧಾನದಿಂದ ಇರುವ ಪಕ್ಷದಲ್ಲಿ ಸ್ವಾರ್ಥತೆಗೆ ಸ್ಥಳವಿರುವುದಿಲ್ಲ. ಇದು ಸಹೋದರರಲ್ಲಿನ ಸಂಬಂಧದ ಮೇಲೆ ಪರಿಣಾಮ ಬೀರುತ್ತದೆ. ಕಣ್ಣಿಗೆ ಕಾಣುವ ದೇವರಾತ್ಮ ಹೊಂದಿರುವ ಸಹೋದರರನನ್ನು ಪ್ರೀತಿಸದೆ ಇರುವವನು ಕಣ್ಣಿಗೆ ಕಾಣದಿರುವ (ನಂಬಿಕೆಯ ಕಣ್ಣಿನಿಂದ ಮಾತ್ರ) ದೇವರನ್ನು ಹೇಗೆ ಪ್ರೀತಿಸುವನು (1ಯೋಹಾನ4: 20,21) ಅವನು ತನಗೆ, ತನ್ನ ಪರವಾಗಿ ಮಾಡುವುದನ್ನು ತಾನು ಅವರಿಗೂ ಅವರ ಪರವಾಗಿ ಮಾಡುವುದನ್ನು, ಅದರೊಡನೆ ಎಚ್ಚರಿಕೆಯಿಂದ ವ್ಯವಹರಿಸುವುದನ್ನು ಕಲಿತುಕೊಂಡಿರುವ ಜೀವನದಲ್ಲಿ ಹೆಚ್ಚಿನ ಬದಲಾವಣೆಯನ್ನು ಉಂಟುಮಾಡುವುದು. ಅವರು ಒಗ್ಗಿಕೊಂಡಿರುವ ಜೀವನ, ಯೋಚನೆ, ಕ್ರಿಯೆ ಮತ್ತು ಮಾತುಗಳ ಬಗ್ಗೆ ಅವನಿಗೂ ಮತ್ತು ಇತರರಿಗೂ ಇದೇ ಎಲ್ಲಾ ನಿಯಮ ಅಥವಾ ಆಜ್ಞೆಯಾಗಿರುವುದಿಲ್ಲ.

ಸಹೋದರರು ಆತನೆಡೆಗೆ ಕರುಣೆ ತೊರಿಸಬೇಕೆಂದು, ನಯವಾಗಿ ಮಾತನಾಡಬೇಕೆಂದು ಆತನು ಬಯಸುವಂತೆ ಆತನೂ ಸಹಾ ಅವರಿಗೆ ಕರುಣೆ ತೋರಿಸಿ, ಅವರೊಂದಿಗೆ ನಯವಾಗಿ ಮಾತನಾಡುವುದನ್ನು ಆತನು ಕಲಿತುಕೊಳ್ಳುತ್ತಾನೆ. ಇತರರು ಆತನ ಅಸಮರ್ಪಕತೆ ಮತ್ತು ಬಲಹೀನತೆಗಳ ಬಗ್ಗೆ ತಾಳ್ಮೆಯಿಂದಿರಬೇಕಾದಲ್ಲಿ, ಈ ಮಾನವ ದೋಷಗಳ ಬಗ್ಗೆ ಉದಾರವಾದ ಆವರಣವನ್ನು ಹೊಂದಿರುವಂತೆ ಆತನು ಸಹಾ ಅವರ ಬಗ್ಗೆ ಅಂತೆಯೇ ಇರಬೇಕಾಗುತ್ತದೆ. ಆತನು ತನ್ನ ಸಹೋದರನು ತನ್ನ ಬಗ್ಗೆ ಯಾವುದೇ ಕೆಟ್ಟ ಮಾತುಗಳನ್ನು ಅವು ಒಂದು ವೇಳೆ ನಿಜವಿದ್ದರೂ ಅವನ್ನು ಆಡದಿರಲು ಬಯಸುವಂತೆ ಆತನು ಸಹಾ ಅವರ ಮೇಲೆ ಕರುಣೆಯ ವಾತ್ಸಲ್ಯವುಳ್ಳವನಾಗಿದ್ದು ಯಾರ ಬಗ್ಗೆ ಕೆಟ್ಟದ್ದನ್ನು ಮಾತನಾಡ ಬಾರದು ಮತ್ತು ಎಲ್ಲರಿಗೂ ವಿಶೇಷವಾಗಿ ನಂಬಿಗಸ್ತ ಮನೆಯವರಿಗೆ ಒಳ್ಳೆಯದನ್ನೇ ಮಾಡುವವನಾಗಿರಬೇಕು. ಇತರರು ತಾನು ವಿವೇಚನಾಪೂರ್ವಕವಾಗಿ ಮಾಡುವುದಕ್ಕಿಂತ ಹೆಚ್ಚಿನದನ್ನು ಮಾಡಲು ಅಪೇಕ್ಷಿಸುವುದನ್ನು ಆತನು ಇಷ್ಟಪಡದಿರುವಂತೆ ಆತನು ಸಹಾ ಇತರರು ವಿವೇಚನಾಪೂರ್ವಕವಾಗಿ ಮಾಡುವುದಕ್ಕಿಂತ ಹೆಚ್ಚಿನದನ್ನು ಅಪೇಕ್ಷಿಸಬಾರದು. ಇದೇ ತತ್ವವನ್ನು ಲೌಕಿಕ ಸಂಗತಿಗಳಿಗೂ ಅಳವಡಿಸಿಕೊಳ್ಳಬೇಕು. ಕ್ರಮೇಣವಾಗಿ ಜೀವನಕ್ರಮವೇ ಬದಲಾಗುತ್ತದೆ. ಅಪೊಸ್ತಲನು ಹೇಳುವಂತೆ ನಾವು ದೇವರ ಮಹಿಮೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಅನುಪಾತದಲ್ಲಿಯೇ ಈ ಬದಲಾವಣೆಯು ಸಹಾ ಉಂಟಾಗುತ್ತದೆ. ನಾವು ದೇವರ ಪ್ರಭಾವದ ಮಹಿಮೆಯನ್ನು ಮೆಚ್ಚಲು ಕಲಿಯುವಾಗ ಅಂದರೆ – ನ್ಯಾಯ ಮತ್ತು ಅದರಿಂದಾದ ಪ್ರೀತಿಯನ್ನೊಳಗೊಂಡಿರುವ ಈ ಸುವರ್ಣ ನಿಯಮದೊಂದಿಗೆ ಇರುವ ದೇವರ ಮಹತ್ತರವಾದ ಗುಣಲಕ್ಷಣಗಳನ್ನು ನಾವು ಎಷ್ಟರ ಮಟ್ಟಿಗೆ ಮೆಚ್ಚುತ್ತೇವೆಯೋ ಅಷ್ಟರ ಮಟ್ಟಿಗೆ ಅದನ್ನು ಅನುಕರಣೆ ಮಾಡುವುದನ್ನು ಕಲಿಯುತ್ತೇವೆ.

ನಮ್ಮ ನೂತನ ಮನಸ್ಸುಗಳು, ನಮ್ಮ ಚಿತ್ತವು ಪವಿತ್ರಾತ್ಮನಿಂದ ಪಡಕೊಂಡಿರುವುದರಿಂದ ಅವು ಪ್ರಭಾವದಿಂದ

ಅಧಿಕ ಪ್ರಭಾವಕ್ಕೆ ಬದಲಾಗುತ್ತಾ ಹೋಗುತ್ತವೆ. ಹೀಗಾಗಿ ನಮ್ಮ ಹೃದಯಗಳಲ್ಲಿ, ಮನಸ್ಸಿನಲ್ಲಿ, ಚಿತ್ತದಲ್ಲಿ ಮತ್ತು ಉದ್ಧೇಶಗಳಲ್ಲಿ ಬದಲಾವಣೆಗಳುಂಟಾಗುತ್ತದೆ. (ಸಾಧ್ಯವಾದಷ್ಟು ಮಟ್ಟಿಗೆ ಬಾಹ್ಯದಲ್ಲೂ ಕೂಡ) ದೇವರ ವಾಗ್ದಾಕ್ಕನುಸಾರವಾಗಿ ನಾವು ಅತ್ಯುನ್ನತವಾದ ಮಹಾಶ್ರೇಷ್ಠ ಮತ್ತು ಅಂತಿಮ ಪುನರುತ್ಥಾನದ ಬದಲಾವಣೆಗೆ "ಅರ್ಹರಾಗುತ್ತೇವೆ." ಬಲಹೀನತೆಯಲ್ಲಿ, ಲಯಾವಸ್ಥೆಯಲ್ಲಿ ಬಿತ್ತಲ್ಪಟ್ಟಿದ್ದು ಶಕ್ತಿ ಹಾಗೂ ಪ್ರಭಾವವುಳ್ಳ ನೂತನ ಸೃಷ್ಟಿಯಾಗಿ ಕ್ರಿಸ್ತ ಯೇಸುವಿನಲ್ಲಿ ಎದ್ದು ಬರುವೆವು. ಅಪೋಸ್ತಲರುಗಳ ಮೂಲಕ ಗದರಿಕೆಗೆ, ತಿದ್ದುಪಡಿಗೆ ಬಹಳಷ್ಟು ಬುದ್ಧಿಮಾತುಗಳೂ, ಬೋಧನೆಗಳೂ ಮತ್ತು ಸಲಹೆಗಳೂ ನಮಗೆ ನೀಡಲ್ಪಟ್ಟಿವೆ. ಇವುಗಳು ನಮ್ಮ ಗದರಿಕೆಗೆ, ತಿದ್ದುಪಾಟಿಗೆ ಲಾಭದಾಯಕವೆಂದು ವಿವಿಧ ಸಹೋದರರುಗಳ ಮೂಲಕ ಪುನಃರುಚ್ಚರಿಸಲ್ಪಟ್ಟಿವೆ ಮತ್ತು ಅನುಮೋದಿಸಲ್ಪಟ್ಟಿವೆ. ಹೀಗಿದ್ದರೂ ಸಹಾ ನಿಯಮ, ಆಶೀರ್ವಾದದಾಯಕ ನಿಯಮದಡಿಯ ಲ್ಲಿರುವ ನೂತನ ಸೃಷ್ಟಿಗಳು ಸುವರ್ಣ ನಿಯಮಕ್ಕಿಂತ ಮಿಗಿಲಾದ ತನ್ನ ಮುಖ್ಯಸ್ಥನ ಮೂಲಕ ಇಡಲ್ಪಟ್ಟಿರುವ ಪ್ರೀತಿಯ ನಿಯಮದಡಿಯಲ್ಲಿದ್ದಾರೆ. ಈಗ ನೆರವೇರಿಸಲ್ಪಡುತ್ತಿರುವ ಅನೇಕ ಸಂಗತಿಗಳನ್ನು ಮೆಚ್ಚುವುದಾದರೆ, ಇದರಿಂದ ನಮಗೆ ತಿಳಿದು ಬರುವುದೇನಂದರೆ ಈಗ ನೂತನಸೃಷ್ಟಿಗಳು ಮಾಡುತ್ತಿರುವ ಅನೇಕ ಸಂಗತಿಗಳನ್ನು ಇನ್ನುಮುಂದೆ ಮಾಡುವುದಿಲ್ಲವೆಂತಲ್ಲ, ಈಗ ಮಾಡದೇ ಇರುವ ಅನೇಕ ಸಂಗತಿಗಳನ್ನು ಉತ್ಸಾಹದಿಂದಲೂ, ದಕ್ಷತೆಯಿಂದಲೂ ಮಾಡುವರು.

## ಬಿಡುಗಡೆಯ ಸಮರ್ಪಕವಾದ ಕಾನೂನು

## The Perfect Law of Liberty

ನೂತನ ಸೃಷ್ಟಿಯನ್ನು ಯಾವುದೇ ಸರಿಯಾದ ಅಂಕೆ ನಿಯಮಗಳಿಲ್ಲದಂತೆ ದೇವರು ತುಂಬಾ ಸ್ವತಂತ್ರವಾಗಿ ಬಿಟ್ಟುಬಿಟ್ಟಿದ್ದಾನೆ ಎಂಬ ಆಲೋಚನೆಗೆ ಯಾರಾದರೂ ಮೊದಲು ಮನಸ್ಸು ಮಾಡಿದ್ದರೆ ಅಂಥವರು ದೇವರ ಈ ನಿಯಮದ ಉದ್ದ ಅಗಲ ಮತ್ತು ವ್ಯಾಪಕತೆ ನೋಡುವಾಗ ನಿಸ್ಸಂದೇಹವಾಗಿ ತನ್ನ ಮನಸ್ಸಿನ ಬದಲಾವಣೆಯನ್ನು ಅನುಭವಿಸುತ್ತಾರೆ. ಇವೆಲ್ಲವೂ ಪ್ರೀತಿಯೆಂಬ ಒಂದೇ ಪದದಲ್ಲಿ ಸಾರಾಂಶಗೊಂಡಿವೆ. "ಬಿಡುಗಡೆಯ ಧರ್ಮಪ್ರಮಾಣ" (ಯಾಕೋಬ 1:25) ಎಂದು ಅಪೋಸ್ತಲನು ಇದನ್ನು ಕರೆದಿದ್ದಾನೆ. ಆದರೆ ದೇವರು ಈ ಬಿಡುಗಡೆಯ ಈ ಕಾನೂನನ್ನು ಕೇವಲ ತನ್ನ ಆತ್ಮನಿಂದ ಹುಟ್ಟಿರುವ ನೂತನ ಸೃಷ್ಟಿಗಳಿಗಷ್ಟೇ ಅನ್ವಯ ಮಾಡಿದ್ದಾನೆ ಹೊರತು ಇದು ಬೇರೆಯವರಿಗೆ ಅನ್ವಯವಾಗದು. ಇತರರು ಇನ್ನೂ ದಾಸರಂತೆ ಮೋಶೆಯ ಧರ್ಮಶಾಸ್ತ್ರಕ್ಕೆ ಅಧೀನರಾಗಿದ್ದು "ಕ್ರಿಸ್ತನು ನೀಡುವ ಪುತ್ರರ ಸ್ವಾತಂತ್ರ್ಯಕ್ಕೆ" ಅರ್ಹರಾಗಿರುವುದಿಲ್ಲ ಆದರೂ ಮೂಲ ಕಾನೂನಿನ ದಂಡನೆಯಾದ ಮರಣದಂಡನೆಗೆ ಒಳಗಾಗಿದ್ದಾರೆ. ಈ ದಂಡನೆಗೊಳಗಾದ ಪಾಪಿಗಳಾಗಿರುವ ಅವರು ಇನ್ನೂ ಸಹಾ ಅಪರಿಚಿತರೂ, ಅನ್ಯರೂ, ಪರಕೀಯರೂ ಆಗಿ ಕಾಣಲ್ಪಡುತ್ತಿದ್ದಾರೆ. ಅವರಿಗೆ ದೇವರಿಲ್ಲ ಮತ್ತು ಈ ಲೋಕದಲ್ಲಿ ಯಾವ ನಿರೀಕ್ಷೆಯಾದರೂ ಇರುವುದಿಲ್ಲ. ಈ ಲೋಕಕ್ಕೆ ಸಾಮಾನ್ಯವಾಗಿ ದೇವರ ಕೃಪೆಯಿಂದ ಬರುವ ರಕ್ಷಣೆಯ ಬಗ್ಗೆ ಅವರಿಗೆ ಏನೂ ತಿಳಿಯದು. ಆದರೆ ಈಗ ಇದು ಕೇವಲ ತುಲನಾತ್ಮಕವಾಗಿ ಕೆಲವರಿಗೆ ಮಾತ್ರವೇ ಪ್ರಕಟವಾಗಿದೆ. ಬಹುಪಾಲು ಜನರಿಗೆ ವಿರೋಧಿಯ ದೆಸೆಯಿಂದ ದೇವರ ಪ್ರೀತಿಯ ಮತ್ತು ವಿಮೋಚನೆಯ ಸಂದೇಶವನ್ನು ಕೇಳಲು ಅಡಚಣೆಯುಂಟಾಗಿದೆ "ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು" (2 ಕೊರಿ. 4:4) "ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ, ದೆವ್ವಗಳ ಬೋಧನೆಗಳಿಗೂ ಲಕ್ಷಕೊಟ್ಟು ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ (1ತಿಮೋಥೆ 4:1).

ಸ್ವಾತಂತ್ರ್ಯವು ಅಕ್ರಮಗಾರರಿಗಾಗಿ ಅಲ್ಲ. ಸಮಾಜವು ಅವರನ್ನು ಸೆರೆಮನೆಗೆ ಹಾಕುವಾಗ ನಾವು ಇದನ್ನು ಕಾಣುತ್ತೇವೆ. ಅದರಂತೆ ವಿಮೋಚನೆಯ ಸಮರ್ಪಕವಾದ ಕಾನೂನು ಸಹಾ ಅಕ್ರಮಗಾರರಿಗೆ ಯುಕ್ತವಾದುದಲ್ಲ. ಅದು ಪರಿಪೂರ್ಣರಾದ ವರಿಗೆ ಮಾತ್ರ, ಸಹಸ್ರವರ್ಷಯುಗದಲ್ಲಿ ಈ ಲೋಕವನ್ನು ಪ್ರೀತಿಯ ಆಳ್ವಿಕೆಗೆ ಬಿಟ್ಟುಬಿಡುವುದಿಲ್ಲ. ಆದರೆ ನ್ಯಾಯ ಮತ್ತು ಕರುಣೆಯಲ್ಲಿ ದೇವರ ರಾಜ್ಯದ ವಿಧೇಯತೆಗೆ ಒಳಪಟ್ಟಂತೆ ಆಳಲಾಗುವುದು. ಜನಾಂಗವು ರಾಜ್ಯದ ಅಂತ್ಯದವರೆಗೂ (ಬೇಕೆಂತಲೇ ತಪ್ಪುಮಾಡುವವರು ಈ ವೇಳೆಗೆ ಎರಡನೆಯ ಮರಣದ ಮೂಲಕ ತೆಗೆದುಹಾಕಲ್ಪಟ್ಟಿರುತ್ತಾರೆ) ತಾನು ಪರಿಪೂರ್ಣರಾಗಿದ್ದೇವೆ ಎಂತಲೂ ಮತ್ತು ದೈವಿಕ ಮಟ್ಟಕ್ಕೆ ಸರಿಯಾಗಿದ್ದೇವೆ ಎಂದು ರುಜುವಾತುಪಡಿಸುವವರೆಗೂ ಬಿಡುಗಡೆಯ ಕಾನೂನಾದ ಪ್ರೀತಿಯೆಂಬ ಸುವರ್ಣ ನಿಯಮಕ್ಕೆ ಒಳಪಡಿಸುವುದಿಲ್ಲ. ಅವರು ಅಪ್ರಾಪ್ತರಾಗಿರುವವರೆಗೂ ಅವರನ್ನು ದಾಸರನ್ನಾಗಿ ಕಾಣಲಾಗುವುದು (ಇಬ್ರಿಯ 13:17). ಈಗ ಬಿಡುಗಡೆಯ ಕಾನೂನಿನ ಅಧೀನದಲ್ಲಿರುವ ನೂತನ ಸೃಷ್ಟಿಯೊಂದಿಗೆ ಸಹ ಅದೇ ರೀತಿಯಲ್ಲಿ ವರ್ತಿಸಲಾಗುವುದು. ಯಾಕೆಂದರೆ ಅವರಿಗೆ "ಹಳೆಯ ಸಂಗತಿಗಳೆಲ್ಲಾ ದಾಟಿ ಹೋಯಿತು, ಎಲ್ಲವೂ ನೂತನವಾಯಿತು" ಅವರೀಗ ಪಾಪವನ್ನು ಹೇಸುತ್ತಾರೆ ಮತ್ತು ನೀತಿವಂತಿಕೆಯನ್ನು ಪ್ರೀತಿಸುತ್ತಾರೆ. ಅದು ದೇಹವನ್ನು ತಣಿಸುವುದಕ್ಕಾಗಿ ಅಲ್ಲ, ಆದರೆ ಅದನ್ನು ದಮನಗೊಳಿಸುವುದಕ್ಕಾಗಿ – ಪಾಪದಲ್ಲಿ ತೊಳಲಾಡುವುದಕ್ಕಲ್ಲ, ದೇವರ ಸಹಕಾರದೊಡನೆ ಲೌಕಿಕ ಹಿತಾಸಕ್ತಿಗಳನ್ನು ತ್ಯಾಗಮಾಡುವುದಕ್ಕಾಗಿ, ಪಾಪದ ಲೋಕವನ್ನು ಮತ್ತು ಅದರ ಫಲವಾದ ಮರಣವನ್ನು ತ್ಯಜಿಸುವುದಕ್ಕಾಗಿ. ಈ ನೂತನ ದೈವ ಸ್ವಭಾವ ಹಾಗೂ ದೇವರಾತ್ಮನ ಮೂಲಕವಾಗಿ ಹುಟ್ಟಿರುವವರು ಮತ್ತು ಕ್ರಿಸ್ತನ ಶಾಲೆಯ ವಿದ್ಯಾರ್ಥಿಗಳಾಗಿ ಆತನ ಹೆಜ್ಜೆಜಾಡಿನಲ್ಲಿ ನಡೆಯಲು ಕಲಿಯುವವರು ಮಾತ್ರವೇ ಈ ಬಿಡುಗಡೆಯ ಕಾನೂನಿನ ಅಧೀನಕ್ಕೆ ಸುರಕ್ಷಿತವಾಗಿ ಒಳಗಾಗುವರು. ಅವರೇನಾದರೂ ತಮ್ಮ ದತ್ತು ಸ್ವೀಕಾರದ ಸ್ಫೂರ್ತಿಯನ್ನು ಕಳಕೊಂಡರೆ ಅವರು ಇನ್ನು ಮುಂದೆ ಮಕ್ಕಳೆನಿಸಿಕೊಳ್ಳುವುದಿಲ್ಲ ಮತ್ತು ಬಿಡುಗಡೆಯ ಕಾನೂನಿಗೆ ಅಧೀನರಾಗುವುದಿಲ್ಲ.

ಕ್ರಿಸ್ತನಲ್ಲಿದ್ದುಕೊಂಡು ಬಿಡುಗಡೆಯನ್ನು ಪ್ರಯೋಗಿಸಲು ಕಲಿತವರು ಸ್ವತಂತ್ರರಾಗಿರುತ್ತಾರೆ. ಯಾರು ಪ್ರತಿಷ್ಠೆಯ ಮೂಲಕ ಸಮರ್ಪಕವಾದ ಪ್ರೀತಿಯ ನಿಯಮಕ್ಕೆ ಒಳಪಡುತ್ತಾರೋ ಮತ್ತು ಯಾರು ಇದರಡಿಯಲ್ಲಿ ಸತ್ಯದ ಮತ್ತು ನೀತಿಯ ಸಲುವಾಗಿ ತಮ್ಮ ಸಹೋದರರಿಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸುತ್ತಾರೋ

ಅವರು ನಂಬಿಗಸ್ಥರೂ ಕರ್ತನ ನಿಯೋಗಿಗಳೂ ಆತನ ಪ್ರೀತಿಯ ಮಗನೊಂದಿಗೆ ಈ ಲೋಕವನ್ನು ಆಶೀರ್ವದಿಸುವ ಮಹಾ ಕಾರ್ಯದಲ್ಲಿ ಸಹಾಯಕರು ಮತ್ತು ಬಾಧ್ಯಸ್ತರೆಂದು ಪರಿಗಣಿಸಲ್ಪಡುತ್ತಾರೆ, ಇಂತಹ ಅರ್ಹತೆಯು ಅದೆಷ್ಟು ಅಗತ್ಯ, ಅವರು ಬೋಧಕರುಗಳು, ಸಹಾಯಕರೂ, ಈ ಲೋಕದ ನ್ಯಾಯಾಧಿಪತಿಗಳೂ, ರಾಜರುಗಳೂ ಅಗಿರುವುದು ಸ್ಪಷ್ಟವಾಗಿ ಎಷ್ಟೋ ಅಗತ್ಯ. ಈ ರೀತಿಯಾಗಿ ಅವರು ಈ ಲೋಕದ ಎಲ್ಲಾ ಕುಟುಂಬಗಳನ್ನೂ ಧರ್ಮಯುಗದಲ್ಲಿ ಆಶೀರ್ವದಿಸುತ್ತಾರೆ. ಅವರನ್ನು ಪ್ರೀತಿಯ ಅರ್ಹತೆಯ ಮೇರೆಗೆ ಕೃಪಾವಂತರೂ ನಿಷ್ಠಾವಂತರೂ ಆದ ರಾಜವಂಶಯಾಜಕರಾಗುವುದಕ್ಕಾಗಿ ಪರೀಕ್ಷಿಸಲಾಗುವುದು! ■

* * * * * *